
ರವಿತೇಜನ

ಮುಕ್ತಕಗಳು



ಬೆಂ. ಶ್ರೀ. ರವೀಂದ್ರ

ರವಿತೇಜನ ಮುಕ್ತಕಗಳು

ಬೆಂ. ಶ್ರೀ. ರವೀಂದ್ರ

ವಿಜ್ಞಾನ ಮತ್ತು ಕಾನೂನಿನ ಅಧ್ಯಾಯಿ.. ಶಾಲಾ ಕಾಲೇಜು ವಿದ್ಯಾರ್ಥಿ ಸಂಘಗಳಲ್ಲಿ ಕ್ರಿಯಾಶೀಲ. ಕನ್ನಡ, ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿ. ಬರಹಗಾರ, ಚರ್ಚಾಪಟು, ಸಂಘಟಕರಾಗಿ ಯಶಸ್ವಿ

1973 ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ. ನೌಕರಿಯ ಜೊತೆಗೆ ಸಾಂಸ್ಕೃತಿಕವಾಗಿ, ಸಂಘಟನಾ ಚತುರರಾಗಿ, ಅಧಿಕಾರಿಗಳ ಸಂಘದ ನಾಯಕನಾಗಿ ಅಲ್ಲದೆ ಕನ್ನಡಪರ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಾಡಿದ ಸಾಧನೆ ಅನನ್ಯ. ಎಸ್‌ಬಿಐ ಬೆಂಗಳೂರು ವೃತ್ತ ಸ್ಥಾಪನೆಯ ಹೋರಾಟದಲ್ಲಿ ಪ್ರಮುಖ ಪಾತ್ರ. ಹಲವು ಶಾಖೆಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಿ, ಸಮನ್ವಯ ಸಮಿತಿಯ ಮೂಲಕ ಕನ್ನಡಿಗರ ಸಂಘಟನೆ.

ಪ್ರಾಚಾರ್ಯ ಎಚ್ಚೆಸ್ಕೆ ಅವರ ನೇತೃತ್ವದಲ್ಲಿ 1980ರಿಂದ 1997ರವರೆಗೆ ಬ್ಯಾಂಕಿಂಗ್ ಪ್ರಪಂಚ ತ್ರೈಮಾಸಿಕ ಪತ್ರಿಕೆಯ ಪ್ರಕಟಣೆ, 1982ರಿಂದ ಬ್ಯಾಂಕಿಂಗ್ ಕಮ್ಮಟಗಳ ಆಯೋಜನೆ, 1985ರಲ್ಲಿ ಬ್ಯಾಂಕಿಂಗ್ ನಿಘಂಟುವಿನ ಬಿಡುಗಡೆಗಳಲ್ಲಿ ತಮ್ಮ ಹೆಜ್ಜೆಗುರುತನ್ನು ಮೂಡಿಸಿದ್ದಾರೆ. "ಬ್ಯಾಂಕಿಂಗ್‌ನಲ್ಲಿ ಕನ್ನಡ: ಕನ್ನಡದಲ್ಲಿ ಬ್ಯಾಂಕಿಂಗ್" ಎನ್ನುವುದವರಿಗೆ ಸಾಧನೆಯ ಮಂತ್ರ. ಬ್ಯಾಂಕುಗಳಲ್ಲಿ ಕನ್ನಡಿಗರ ನೇಮಕಾತಿ, ಕನ್ನಡದ ಅನುಷ್ಠಾನದ ಬಗ್ಗೆ ಕರ್ನಾಟಕ ಸರ್ಕಾರವು ದೆಹಲಿಗೆ ಕಳುಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿಯೋಗದ ಸದಸ್ಯರಾಗಿದ್ದರು.

ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಸಂಘ (ಕರ್ನಾಟಕ); ಅಖಿಲ ಭಾರತ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿ; ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟ ಹಾಗೂ ಬ್ಯಾಂಕ್

ಕಾರ್ಮಿಕ ಸಂಘಗಳ ಸಂಯುಕ್ತ ವೇದಿಕೆಗಳಲ್ಲಿ ಮುಂಚೂಣಿಯಲ್ಲಿ ನಿಂತು ಸುದೀರ್ಘವಾಗಿ, ಕಾರ್ಯನಿರ್ವಹಿಸಿದ್ದಾರೆ. ನಾಯಕತ್ವ ತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದು, ನಾಳಿನ ಉತ್ತಮ ನಾಯಕರು ಸಾಗಬೇಕಾದ ದಾರಿಯನ್ನು ತೋರುವ ಮಾರ್ಗದರ್ಶಕರಾದ ರವೀಂದ್ರರು ಆಚಾರ್ಯಮುಷ್ಟಿಯಿಲ್ಲದ ಗುರು.

1996ರಲ್ಲಿ ಪ್ರಥಮ ಕವನ ಸಂಕಲನ 'ಶೂನ್ಯವಲ್ಲದೆ ಬೇರೆ, 2021 ರಲ್ಲಿ ಮಕ್ಕಳ ಕವನ ಸಂಕಲನ 'ಆದಿಯೂ ನೆಟ್‌ನ ಪಾಠವೂ' 2023ರಲ್ಲಿ ವಚನಗಳ 'ಇಬ್ಬನಿ ಬನಿ' ಸಂಗ್ರಹ ಹಾಗೂ ಪ್ರಸಕ್ತ ಕರ್ನಾಟಕ ಸಂಗೀತದ ಹಿರಿಯ ವಾಗ್ಗೇಯಕಾರ ಶ್ರೀ ಅರ್.ಕೆ. ಪದ್ಮನಾಭರ ಜೀವನ ಸಂಕಥನ "ಪದ್ಮನಾದ' ಪುಸ್ತಕಗಳು ಲೋಕಾರ್ಪಣೆಗೊಂಡಿವೆ. 2013ರಲ್ಲಿ 'ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ವೃತ್ತ ರಚನೆಗೆ ಸಂಬಂಧಿಸಿದ "ಹೋರಾಟದ ಹೆಜ್ಜೆಯ ಗುರುತುಗಳು", ಹಲವಾರು ಕವನ ಸಂಕಲನಗಳು, ಸಾಹಿತ್ಯ ಸಂಚಿಕೆಗಳು ಮತ್ತು ವ್ಯಕ್ತಿತ್ವ [illegible]ನ ಪುಸ್ತಿಕೆಗಳ ಸಂಪಾದಕರು.

1999ರಿಂದ ಪ್ರತಿ ತಿಂಗಳ ಸಾಹಿತ್ಯ ಕಾರ್ಯಕ್ರಮ, "ಸಾಹಿತ್ಯ ದಾಸೋಹ' ವೇದಿಕೆಯ ಸ್ಥಾಪನೆ. ಇಲ್ಲಿಯವರೆಗೆ 212 ತಿಂಗಳ ದಾಸೋಹದ ಕಾರ್ಯಕ್ರಮಗಳು. 2014ರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ದ ಸ್ಥಾಪನೆ. ತನ್ಮೂಲಕ ಈವರೆಗೆ ಪ್ರಕಟವಾಗಿರುವ 5 ಸಾಹಿತ್ಯ ಸಂಚಿಕೆಗಳು, 89 ಕವಿಗಳ ಸರಪಳಿ ಕವನ ಸಂಕಲನ 'ಸರಸಮ್ಮನಿಗೆ ಸತ್ಕಾರ ಸರಪಳಿಗೆ ನಮಸ್ಕಾರ' ಹಾಗೂ ಇತ್ತೀಚೆಗೆ 27 ಕಾದಂಬರಿಕಾರರ ಖೋ ಕಾದಂಬರಿ 'ಪಲ್ಲಟ" - ಪುಸ್ತಕಗಳ ಸಂಪಾದಕ ಮಂಡಲಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಮುಕ್ತಕಗಳನ್ನು ಬರೆಯುವುದು ಅವರಿಗೆ ಹೊಸದಲ್ಲದಿದ್ದರೂ, ಪ್ರಕಟವಾಗುತ್ತಿರುವುದು ಇದೇ ಪ್ರಥಮ, ಕನ್ನಡ ಜನರು ಈ ನವಸಾಹಿತ್ಯ ಕುಸುಮವನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನನ್ನ ನಂಬಿಕೆ.

ಟಿ. ಎಸ್. ಶ್ರವಣ ಕುಮಾರಿ,
ಕಥೆಗಾರರು, ಪ್ರಬಂಧ ಲೇಖಕರು.

ರವಿತೇಜನ ಮುಕ್ತಕಗಳು

ಮುಕ್ತಕಗಳು

ಬೆಂ.ಶ್ರೀ.ರವೀಂದ್ರ

ಅನನ್ಯ ಪ್ರಕಾಶನ
909/1ಬಿ, ಮೊದಲನೇ ಮುಖ್ಯರಸ್ತೆ, ಲಕ್ಷ್ಮೀಪುರಂ,
ಮೈಸೂರು 570 004. ದೂರವಾಣಿ: 94480–37762
E-mail: samskruthisubramanya@gmail.com

RAVITHEJANA MUKTHAKAGALU

MUKTHAKAGALU

Author	:	B.S. Ravindra
Published by	:	Ananya Publications
© Copy Right	:	Author
First Edition	:	2023
Copies	:	1000
Pages	:	18+142 = 160
Price	:	Rs. 130/-
Book size	:	Crown 1/8
Paper sised	:	70 GSM N.S. Maplitho

ರವಿತೇಜನ ಮುಕ್ತಕಗಳು

ಮುಕ್ತಕಗಳು

ಲೇಖಕರು	:	ಬೆಂ.ಶ್ರೀ. ರವೀಂದ್ರ
ಪ್ರಕಾಶಕರು	:	ಅನನ್ಯ ಪ್ರಕಾಶನ, ಮೈಸೂರು
© ಹಕ್ಕುಗಳು	:	ಲೇಖಕರು
ಮೊದಲ ಮುದ್ರಣ	:	2023
ಪ್ರತಿಗಳು	:	1000
ಪುಟಗಳು	:	20 +140 = 160
ಬೆಲೆ	:	ರೂ. 130/–
ಪುಸ್ತಕದ ಆಕಾರ	:	ಕ್ರೌನ್ 1/8
ಬಳಸಿದ ಕಾಗದ	:	70 ಜಿ.ಎಸ್.ಎಂ, ಎನ್.ಎಸ್ ಮ್ಯಾಪ್ಲಿಥೊ
ಮುದ್ರಕರು	:	ಪಾರಿಜಾತ ಪ್ರಿಂಟರ್ಸ್, ಮೈಸೂರು ದೂರವಾಣಿ: 98451–10147

ಅರ್ಪಣೆ

ಅರ್ಪಿಸುವುದದಾರಿಗೆ ಮುಕ್ತಕದ ಮಾತನ್ನು
ಕನ್ನಡನುಡಿ ಕಲಿಸಿದ ಅಮ್ಮನಿಗೆ ಅಪ್ಪನಿಗೆ
ಗುರುಗಳಿಗೆ ಬಂಧು ಮಿತ್ರರಿಗೆ ರವಿತೇಜ

ಅಜ್ಞಾತಮೂಲೆಯಲ್ಲೆಲ್ಲೊ ಕುಳಿತು
ಅನುದಿನದ ಬಾಧೆಗಳನೆಲ್ಲ ನಗುತ ಅನುಭವಿಸಿ
ಹಾಡುವ ಕನ್ನಡ ಜನಪದರಿಗೆ ರವಿತೇಜ

ಅಕ್ಷರವು ನನದಲ್ಲ ಮುಕ್ತಕವೂ ನನದಲ್ಲ
ಅನುಭವಕ್ಕೆ ಉಸಿರಿತ್ತು ಚಿಂತನೆಗೆ ಮೆರಗಿತ್ತ
ಶಾರದೆಯೆ ನಿನಗಲ್ಲದೆ ಮತ್ಯಾರಿಗೆ ರವಿತೇಜ

..... **ಬೆಂಶ್ರೀ ರವೀಂದ್ರ.**

ಒಂದರೆಡು ಮುಕ್ತ ಮಾತುಗಳು

"ಸಮನ್ವಯ ಸಮಿತಿ ಕನ್ನಡವೇ ಸತ್ಯ" ವೇದಿಕೆಯು, ಕರ್ನಾಟಕದಲ್ಲಿ ವಿಶಿಷ್ಟವಾದ ವಾಟ್ಸ್ಯಾಪ್ ಸಾಹಿತ್ಯ ವೇದಿಕೆ. ಸೃಜನಶೀಲ ಅಭಿವ್ಯಕ್ತಿಗೆ ಮಾತ್ರವೇ ಅವಕಾಶ. ಯಾವುದೇ ರೀತಿಯ ಮುಂದೊತ್ತುಗಳಾಗಲಿ, ಶುಭ ಬೆಳಗು, ರಾತ್ರಿಗಳಾಗಲಿ, ಸ್ವಂತ ವಿಷಯಗಳಾಗಲಿ, ಸಮಾಜವನ್ನು ವಿಭಜಿಸುವ ರಾಜಕೀಯ ಹಾಗೂ ಧಾರ್ಮಿಕ ಅಥವಾ ಇನ್ನಾವುದೇ ನೋವುಂಟು ಸಾಮಾಜಿಕ, ವೈಯಕ್ತಿಕ ಮಾಡುವ ಪ್ರಸ್ತುತಿಗಳಿಗೆ ಅವಕಾಶವಿಲ್ಲ. ಸಂವಹನ, ಕನ್ನಡ ಭಾಷೆಯಲ್ಲಿ ಮಾತ್ರ.

ಕಳೆದ ಒಂಭತ್ತು ವರ್ಷಗಳಿಂದ ಕ್ರಿಯಾಶೀಲವಾಗಿರುವ ವೇದಿಕೆಯಲ್ಲಿ 200 ಸದಸ್ಯರಿದ್ದಾರೆ. ಹಲವಾರು ಪ್ರಸಿದ್ಧ ಬರಹಗಾರರಿದ್ದಾರೆ. ಕಲಿತ, ಕಲಿಯುವ, ಕಲಿಸುವ ಮನಸ್ಸುಗಳಿವೆ. ಅತ್ಯಂತ ಪ್ರಯೋಗಶೀಲವಾಗಿರುವ ವೇದಿಕೆಯಲ್ಲಿ ಇತ್ತೀಚೆಗೆ 27 ಸದಸ್ಯರು ಕೂಡಿ ರಚಿಸಿದ ಖೋ ಕಾದಂಬರಿ 'ಪಲ್ಲಟ' ಬಿಡುಗಡೆಯಾಯಿತು. ಸಾಹಿತ್ಯಕ ವಲಯದಲ್ಲಿ ಸಂಚಲನ ಮೂಡಿಸಿರುವ ಖೋ ಕಾದಂಬರಿಯು ಕನ್ನಡದಲ್ಲಿ ಅಪರೂಪವಾದ ವಿಶಿಷ್ಟ ಪ್ರಯೋಗವಾಗಿದೆ. ಇಲ್ಲಿಯ ತನಕ ಐದು ಸಾಹಿತ್ಯ ಸಂಚಿಕೆಗಳನ್ನು ಹೊರತಂದಿರುವ ವೇದಿಕೆಯು 89 ಕವಿಗಳ ಸರಪಳಿ ಕವನ ಸಂಕಲವನ್ನೂ ಪ್ರಕಟಿಸಿದೆ. 2020 ರಲ್ಲಿ ಪ್ರಾಚಾರ್ಯ ಎಚ್ಚೆಸ್ ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ನೂರು ವರ್ಷದ ಹಬ್ಬವನ್ನು ಆಚರಿಸಿದಾಗ ನಮ್ಮ ವೇದಿಕೆಯ ಸದಸ್ಯರು 55 ಕೃತಿಗಳನ್ನು ಬಿಡುಗಡೆ ಮಾಡಿದರೆಂಬುದು ಹೆಮ್ಮೆಯ ಸಂಗತಿಯಾಗಿದೆ. ಇಲ್ಲಿಯವರೆಗೆ, 213 ಪ್ರತಿ ತಿಂಗಳ ಸಾಹಿತ್ಯ ದಾಸೋಹಗಳಾಗಿವೆ. ಒಂದು ರೀತಿಯಲ್ಲಿ ವೇದಿಕೆಯಲ್ಲಿ ನಿತ್ಯ ಸಾಹಿತ್ಯ ಕಮ್ಮಟವೇ ನಡೆಯುತ್ತದೆ. ಕಥೆ, ಕವನ. ಕಾದಂಬರಿ, ನಗೆ ಲೇಖನಗಳು, ನಾಟಕಗಳು, ವಿಚಾರ ಪ್ರಚೋದಕವಾದ ಚರ್ಚೆಗಳು ಅಲ್ಲಿ ನಡೆಯುತ್ತವೆ.

ಡಾ ಶುಭಶ್ರೀ ಪ್ರಸಾದ್ ಅವರು ಸಸಕಸ ವೇದಿಕೆಯ ಹೆಮ್ಮೆಯ

ಸದಸ್ಯರು. ಪ್ರಸಿದ್ಧ ಬರಹಗಾರ್ತಿಯಾದ ಅವರ ಪ್ರಸ್ತುತಿಗಳು ಬಹಳ ಮೌಲಿಕವಾಗಿರುತ್ತವೆ. ಕಳೆದ 04/10/2021 ರಿಂದ 16/02/2023 ರ ವರೆಗೆ ಪ್ರತಿದಿನ 'ಶುಭನುಡಿ' ಎಂಬ ಮೂರುಸಾಲಿನ ಮುಕ್ತಕಗಳನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸಿದರು. ವೈವಿಧ್ಯಮಯವಾದ ವಿಷಯಗಳು, ಸಾಮಾಜಿಕ, ರಾಜಕೀಯ, ಧಾರ್ಮಿಕ, ಮಾರ್ಮಿಕ, ಆಧ್ಯಾತ್ಮಿಕ, ಜನಜೀವನಕ್ಕೆ ಸಂಬಂಧಿಸಿದ ವಿಷಯಗಳು ಸ್ವಾನುಭವದ ಮೂಸೆಯಲ್ಲಿ ಅರಳಿ ಸ್ಫುಟಗೊಂಡವು. ಸರಳ ಆದರೆ ಸಾರವತ್ತಾದ ಮಾತುಗಳು. ಸುಲಭಗ್ರಾಹ್ಯ. ಕಲಿಯುವ, ಕಲಿಸುವ ಎರಡೂ ಶಕ್ತಿಗಳು ಶುಭನುಡಿಗೆ ಇದ್ದವು. ವೇದಿಕೆಯ ಹಲವಾರು ಸದಸ್ಯರು, ಈ ನುಡಿಗಳ ಬಗ್ಗೆ ಚರ್ಚೆ ನಡೆಸಿದ್ದಲ್ಲದೆ, ಬಹುವಾಗಿ ಮೆಚ್ಚಿಕೊಂಡೆವು. ಶುಭಶ್ರೀ ಅವರ ನುಡಿಗಳಿಗೆ ಪ್ರತಿಸ್ಪಂದನ ರೂಪದಲ್ಲಿ, ನಾನು ಕೆಲವು ಮುಕ್ತಕಗಳನ್ನು ವೇದಿಕೆಯಲ್ಲಿ ಬರೆದೆ. ಕೆಲವನ್ನು ಅವರಿಗೇ ಕಳಿಸಿದೆ. ಮರುಸ್ಪಂದನೆಗಳನ್ನು ನಿರಂತರವಾಗಿ ಮಾಡುವುದು ನನ್ನ ಉದ್ದೇಶವಾಗಿರಲಿಲ್ಲ. ಕೆಲ ದಿನಗಳ ನಂತರ ಅದು ನಿಂತಿತು ಕೂಡಾ. ಆದರೆ ಶುಭಶ್ರೀ ಅವರು ಕರೆಮಾಡಿ ಮುಂದುವರೆಸುವಂತೆ ತಿಳಿಸಿದರು. ಎಲ್ಲಿಯವರೆಗೆ, ಅನ್ನುವುದು ಅವರ ಲೆಕ್ಕಾಚಾರದಲ್ಲಿ ಇರಲಿಲ್ಲ. ನಾನು ಎಲ್ಲಿಯವರೆಗೆ 'ಶುಭನುಡಿ' ಯನ್ನು ಬರೆಯುತ್ತಿರುತ್ತೇನೊ ಅಲ್ಲಿಯವರೆಗೆ ಬರೆಯಿರಿ, ನಂತರ ನೋಡೋಣ ಅಂದರು. ಈ ಮಾತುಗಳನ್ನು ಸೋದರಿಯೊಬ್ಬಳಿಂದ ಬಂದ ಹಿತವಾದ ಆದೇಶವೆಂದು ನಾನು ಪರಿಗಣಿಸಿದೆ. ಆದರೆ, ಒಂದು ಷರತ್ತಿನಿಂದ 'ವೇದಿಕೆಯಲ್ಲಿ ನನ್ನ ವಚನಗಳನ್ನು ಪ್ರಕಟಿಸುವುದಿಲ್ಲ. ನಿಮಗೆ ಮಾತ್ರಾ ಕಳಿಸುತ್ತೇನೆ' ಎಂದೇ, ಒಪ್ಪಿದರು. ಹೀಗೆ ರವಿತೇಜನ ಮುಕ್ತಕಗಳು ಆರಂಭವಾದವು.

ನನಗೆ ಜವಾಬ್ದಾರಿ ಹೆಚ್ಚಿತು. ನನ್ನ ಮುಕ್ತಕಗಳು, ಶುಭನುಡಿಯ ಪ್ರತಿಬಿಂಬಗಳಾಗದೆ, ಅದರ ಸತ್ವವನ್ನು ಅರಗಿಸಿಕೊಂಡು ನನ್ನದೇ

ಛಾಪಿನಲ್ಲಿ, ಅನುಭವದ ವ್ಯಾಪ್ತಿಯಲ್ಲಿ, ನನ್ನ ಚಿಂತನೆಗಳಲ್ಲಿ ಮುಕ್ತಕಗಳು ಒಡಮೂಡಬೇಕೆಂದು ನಾನು ನಿಶ್ಚಯಿಸಿದೆ. ಈ ಹಿಂದೆ ಚುಟುಕುಗಳನ್ನು ಬರೆದು ಅಭ್ಯಾಸವಿತ್ತು. 'ಪಂಚಪ್ಪನ ಪದಗಳು', ರಾಜಕೀಯ ವಿಡಂಬನೆಗಳು, 5 ಸಾಲಿನದು, ಫೇಸ್ಬುಕ್ ನಲ್ಲಿ ಸುಮಾರು ದಿವಸ ಬರೆದಿದ್ದೆ. ನಾಕು ಸಾಲಿನ ನ್ಯಾನೊಗಳು, ಚುರುಮುರಿ, ಛೇಡಿಕೆಗಳು, ಆರುಸಾಲಿನ ರಾಜಕೀಯ ಸಾಮಾಜಿಕ ವಿಡಂಬನೆ. ತಲ್ಲಣಗಳು, ಆರು-ಎಂಟು ಸಾಲಿನ ಪ್ರೇಮ ನಿವೇದನಾ ಕವಿತೆಗಳು.. ಮುಂತಾಗಿ. ವೇದಿಕೆಯಲ್ಲಿ ಮತ್ತು ಇತರ ಕಡೆ ಪ್ರಕಟವಾಗಿತ್ತು. ಹಾಗಾಗಿ ನನಗೆ ಒಂದು ರೀತಿಯ ಧೈರ್ಯ.

ಶುಭಶ್ರೀ ಅವರಿಗೆ ಧನ್ಯವಾದಗಳು. ಸತತವಾಗಿ ನಾನೂ ಬರೆಯುವಂತೆ ಮಾಡಿದ್ದು, ಮೆಚ್ಚುಗೆಯನ್ನು ಸೂಚಿಸಿ ಪ್ರೋತ್ಸಾಹಿಸಿದ್ದೂ ಅವರೆ. ನನ್ನ ಮುಕ್ತಕಗಳು ಈಗ ನಿಜವಾದ ಪರೀಕ್ಷೆಗೆ ಒಳಪಡುತ್ತವೆ. ಇಲ್ಲಿಯವರೆಗೆ ಶುಭಶ್ರೀ ಒಬ್ಬರೆ ಓದುಗರಾಗಿದ್ದರು. ಈಗ ಸಮಸ್ತ ಕನ್ನಡಿಗರೂ ತಮ್ಮ ಅಭಿಪ್ರಾಯವನ್ನು ತಿಳಿಸಬಹುದಾಗಿದೆ.

ಮಿತ್ರರಾದ ಶ್ರೀ ಸಂಸ್ಕೃತಿ ಸುಬ್ರಹ್ಮಣ್ಯ, ಲೇಖಕರು ಮತ್ತು ಪುಸ್ತಕ ಸಲಹೆಗಾರರು, ಮೈಸೂರು ಇವರು 'ರವಿತೇಜನ ಮುಕ್ತಕಗಳು' ಅನ್ನು, ತಮ್ಮ 'ಅನನ್ಯ ಪ್ರಕಾಶನ'ದ ಮೂಲಕ ಬೆಳಕು ಕಾಣಿಸಿದ್ದು ಮಹತ್ವದ ವಿಚಾರ. ನಾನು ಅವರ ಈ ಪ್ರೋತ್ಸಾಹಕ್ಕೆ ಆಭಾರಿಯಾಗಿದ್ದೇನೆ.

ಮುಕ್ತಕಗಳನ್ನು ವಿಶ್ಲೇಷಿಸಿ ಪ್ರೋತ್ಸಾಹದಾಯಕವಾದ ಮುನ್ನುಡಿಯನ್ನು ಬರೆದುಕೊಟ್ಟ ಮುಂಬಾಯಿ ನಿವಾಸಿ, ಸಾಹಿತಿ ಮಿತ್ರರಾದ ಶ್ರೀಮತಿ ಶಾರದಾ ಅಂಚನ್ ಕೊಡವೂರು ಅವರಿಗೆ ಧನ್ಯವಾದಗಳು.

ನನ್ನ ಬಹುಕಾಲದ ಮಿತ್ರರೂ, ನಮ್ಮ ನಾಡಿನ ಖ್ಯಾತ ಬರಹಗಾರರೂ ಆದ ಶ್ರೀ ಎಂಎಸ್ ನರಸಿಂಹ ಮೂರ್ತಿಯವರು ಅಭಿಮಾನದಿಂದ

ಬೆನ್ನುತಟ್ಟಿ ಬೆನ್ನುಡಿಯನ್ನು ಬರೆದಿದ್ದಾರೆ. ಶ್ರೀ ಎಂಎಸ್‌ಎನ್ ಅವರಿಗೆ ವಂದನೆಗಳು.

ಅಂದವಾಗಿ ಮುಖಪುಟವನ್ನು ರಚಿಸಿದ ಶ್ರೀ ಶ್ರೀಧರ, ಮಂಡ್ಯ ಮತ್ತು ಪುಟವಿನ್ಯಾಸಗೊಳಿಸಿದ ಶ್ರೀಮತಿ ಚಂದ್ರಪ್ರಭ ಅವರಿಗೆ ಧನ್ಯವಾದಗಳು. ಕರಡು ತಿದ್ದುವುದರಲ್ಲಿ ಸಹಾಯ ಮಾಡಿದ ಶ್ರೀ ಟಿಕೆ ರಂಗನಾಥ, ಶ್ರೀ ಎಚ್ ಎಲ್ ಗುರುಪ್ರಸಾದ್ ಮತ್ತು ಪರಿಚಯವನ್ನು ಮಾಡಿರುವ ಶ್ರೀಮತಿ ಶ್ರವಣಕುಮಾರಿ ಅವರಿಗೆ ನಾನು ಆಭಾರಿ. ನನ್ನ ಬರಹಗಳನ್ನು ಸತತವಾಗಿ ಪ್ರೋತ್ಸಾಹಿಸುವ ನನ್ನ ಶ್ರೀಮತಿ ಪುಷ್ಪಲತಾ ಮತ್ತು ಮನೆಯರಿಗೆಲ್ಲಾ ಧನ್ಯವಾದಗಳು.

ಸಹೃದಯ ಓದುಗರು ಮುಕ್ತವಾದ ಮನಸ್ಸಿಂದ ಈ ಮುಕ್ತಕಗಳನ್ನು ಸ್ವೀಕರಿಸುತ್ತಾರೆ ಎಂದು ಭಾವಿಸುತ್ತೇನೆ.

11/06/2023 **ವಂದನೆಗಳು ಬೆಂ.ಶ್ರೀ. ರವೀಂದ್ರ.**

ಬೆಂಗಳೂರು

ಮುನ್ನುಡಿ

ಅಸ್ತವ್ಯಸ್ತವಾಗಿರುವ ಪ್ರಪಂಚದ ಜೀವನದಿಯಲ್ಲಿ ಸಂಚಲನವನ್ನು ಮೂಡಿಸಬಲ್ಲ ಒಂದು ಮಾಧ್ಯಮವೆಂದರೆ ಅದು ಸಾಹಿತ್ಯ. ನಿಯಮಿತವಾಗಿ ಸಾಹಿತ್ಯ ಓದುವುದರಿಂದ ಮೆದುಳಿನ ಸಂಪರ್ಕ ಸುಧಾರಿಸುತ್ತದೆ, ಶಬ್ದಕೋಶ ಮತ್ತು ಗ್ರಹಿಕೆಯನ್ನು ಹೆಚ್ಚಿಸುತ್ತದೆ, ಜನರೊಂದಿಗೆ ಸಹಾನುಭೂತಿ ಹೊಂದಲು ಸಹಾಯವಾಗುತ್ತದೆ, ಸುಖನಿದ್ರೆಗೆ ಸಹಾಯ ಮಾಡುತ್ತದೆ. ರಕ್ತದೊತ್ತಡ ಮತ್ತು ಹೃದಯ ಬಡಿತವನ್ನು ಕಡಿಮೆ ಮಾಡುತ್ತದೆ, ಖಿನ್ನತೆಯ ಲಕ್ಷಣಗಳ ವಿರುದ್ಧ ಹೋರಾಡುತ್ತದೆ ಮತ್ತು ವಯಸ್ಸಾದಂತೆ ಆಗುವ ಮರೆವನ್ನು ತಡೆಯುತ್ತದೆ.

ಸಾಹಿತ್ಯ ಓದುವುದರಿಂದ ಜಗತ್ತನ್ನು ಇತರರ ದೃಷ್ಟಿಯಲ್ಲಿ ನೋಡಲು ಸಾಧ್ಯವಾಗುತ್ತದೆ. ಇದು ಮನಸ್ಸನ್ನು ಭಾವನಾತ್ಮಕವಾಗಿ ಹೊಂದಿಸಿಕೊಳ್ಳಲು ಮತ್ತು ಇತರೆ ವಿಚಾರಗಳನ್ನು ಗ್ರಹಿಸಲು ತರಬೇತಿ ನೀಡುತ್ತದೆ, ವೈಯಕ್ತಿಕ ದೃಷ್ಟಿಕೋನಗಳನ್ನು ಬದಿಗಿಟ್ಟು ಇನ್ನೊಂದು ವರ್ಗ ಅಥವಾ ಜನಾಂಗದವರ ಜೀವನ ಶೈಲಿ, ಸಂಸ್ಕೃತಿ, ಸಂಸ್ಕಾರಗಳ ತಿಳುವಳಿಕೆ ಸಾಹಿತ್ಯದ ಮೂಲಕ ಆಗುತ್ತದೆ.

ಇತ್ತೀಚಿನ ಗ್ಲೋಬಲ್ ಜಗತ್ತಿನಲ್ಲಿ ನಮ್ಮ ಮನ:ಸ್ಥಿತಿ ಅಸ್ತವ್ಯಸ್ತವಾಗಿದೆ. ದೇವರು, ಪ್ರಕೃತಿ, ಪರಿಸರ, ಸಮಾಜ ಮತ್ತು ಬಂಧು – ಬಾಂಧವರಿಂದ ಸಂಪರ್ಕ ತುಂಡಾಗುತ್ತಿರುವ ಈ ದಿನಗಳಲ್ಲಿ ಸಾಹಿತ್ಯವು ಪುನಶ್ಚೈತನ್ಯಕಾರಿ ಚಿಕಿತ್ಸೆಯನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ. ಹಾಗಾದರೆ, ಯಾವ ರೀತಿಯ ಸಾಹಿತ್ಯವು ಅಂತಹ ಶಕ್ತಿಯನ್ನು ಹೊಂದಿದೆ?

ಪುಸ್ತಕವು ಮೂರು ಮಾನದಂಡಗಳನ್ನು ಪೂರೈಸಿದರೆ ಅದನ್ನು ಶ್ರೇಷ್ಠವೆಂದು ಪರಿಗಣಿಸಬಹುದು. ಮೊದಲನೆಯದು ಸಾರ್ವತ್ರಿಕತೆ. ಒಂದು ಶ್ರೇಷ್ಠ ಪುಸ್ತಕವು ಅನೇಕ ವಯಸ್ಸಿನ ಜನರೊಂದಿಗೆ ಮಾತನಾಡುತ್ತದೆ – ಸಮಯ ಮತ್ತು ಸ್ಥಳದ ಅಭಾವವಿರುವ

ಓದುಗರನ್ನು ಪ್ರಭಾವಿಸುವ, ಸ್ಫೂರ್ತಿದಾಯಕ ಕೆಲಸ ಮಾಡುತ್ತದೆ. ಎರಡನೆಯದಾಗಿ, ಇದು ಸೆಂಟ್ರಲ್ ಆನ್ ಐಡಿಯಾ ಮತ್ತು ಶಾಶ್ವತವಾದ ಪ್ರಮುಖವಾದ ವಿಷಯಗಳನ್ನು ತಿಳಿಸುವ ಗುರಿಗಳನ್ನೂ ಹೊಂದಿದೆ ಮತ್ತು ಮೂರನೆಯದಾಗಿ, ಇದು ಉದಾತ್ತ ಭಾಷೆಯನ್ನು ಒಳಗೊಂಡಿದೆ. ಇಂತಹ ಸಾಹಿತ್ಯ ಜನರನ್ನು ಬೇಗ ತಲುಪಬಲ್ಲುದು.

ಪುರಾತನ ಕಾಲದಿಂದಲೂ ಸಾಹಿತ್ಯ ಪ್ರಕಾರದ ಒಂದು ಮಾದರಿಯಾಗಿರುವ ಮುಕ್ತಕಗಳನ್ನು ಕಡಿಮೆ ಶಬ್ದಗಳಲ್ಲಿ ಬಹಳಷ್ಟು ವಿಷಯಗಳನ್ನು ವರ್ಣಿಸುವ ಒಂದು ಶ್ರೇಷ್ಠ ಬರಹ ಶೈಲಿ ಎನ್ನಬಹುದು. ಇದಕ್ಕೆ ಉದಾಹರಣೆ ಇಂದಿಗೂ ಜನಮನ್ನಣೆಯನ್ನು ಪಡೆದ ಸರ್ವಜ್ಞನ ವಚನಗಳು. ಹಳೆಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಮುಕ್ತಕಗಳನ್ನು ವಚನ, ಚಾಟುಪದ್ಯ ಮುಂತಾಗಿ ಕರೆದಿದ್ದಾರೆ. ಹೊಸಗನ್ನಡ ಕಾವ್ಯ ಪ್ರಕಾರಗಳಲ್ಲಿ ಇದಕ್ಕೆ ನಾಟುನುಡಿ, ಚುಟುಕು ಮುಂತಾದ ಹೆಸರುಗಳು. ತೆಲುಗಿನಲ್ಲಿ ಚಾಟುಪದ್ಯ, ತಮಿಳಿನಲ್ಲಿ ನಾಟುನುಡಿ, ಉರ್ದುವಿನಲ್ಲಿ ಶಾಯರಿ, ಪ್ರಾಕೃತದಲ್ಲಿ ಗಾಥಾ ರಹೇ ಎಂದು ಮುಕ್ತಕದ ವಿವಿಧ ಹೆಸರುಗಳು. ಪಾಶ್ಚಿಮಾತ್ಯ ಸಾಹಿತ್ಯದಲ್ಲೂ ಈ ಪ್ರಕಾರವಿದೆ. ಎಫಿಗ್ರಾಫ್ಸ್,ಲಿಮೆರಿಕ್ , ಎಲಿಜಿ, ನಾನ್ಸೆನ್ಸ್ ಪೊಯೆಮ್ಸ್ ಮುಂತಾಗಿ ಕರೆಯಲ್ಪಡುವ ರಚನೆಗಳು ನಮ್ಮ ಮುಕ್ತಕವನ್ನು ಹೋಲುತ್ತವೆ.

ಶ್ರೀಯುತ ಬೆಂ ಶ್ರೀ ರವೀಂದ್ರರವರು ಭಾರತೀಯ ಸ್ಟೇಟ್ ಬ್ಯಾಂಕ್ನಲ್ಲಿ ಅಧಿಕಾರಿಯಾಗಿದ್ದು ನಿವೃತ್ತರಾದವರು. ವಿಜ್ಞಾನ ಮತ್ತು ಕಾನೂನನ್ನು ಅಭ್ಯಸಿಸಿದ್ದಾರೆ. ಸಂಘಟಕರಾಗಿ, ಸಾಹಿತಿಯಾಗಿ ಹೆಸರು ಪಡೆದವರು. ಹಲವಾರು ಸಾಹಿತ್ಯ ಮತ್ತು ಸಂಘಟನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಾರತೀಯ ಸ್ಟೇಟ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಹಾಗೂ ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡಸಂಘಗಳ ಪರಿಷತ್ತಿನಲ್ಲಿ ಕ್ರಿಯಾಶೀಲ ಪದಾಧಿಕಾರಿಯಾಗಿ

ಸೇವೆ ಸಲ್ಲಿಸಿದವರು. ಕವನ ಸಂಕಲನ, ಮಕ್ಕಳ ಗೀತೆ, ಜೀವನ ಸಂಕಥನಗಳನ್ನು ರಚಿಸಿರುವ ಇವರು ಹಲವಾರು ವ್ಯಕ್ತಿತ್ವ ವಿಕಸನಗಳ ಕೃತಿಗಳನ್ನು ತಮ್ಮ ಸಂಪಾದಕತ್ವದಲ್ಲಿ ಹೊರತಂದಿದ್ದಾರೆ. ಸಾಹಿತ್ಯ ದಾಸೋಹ ಎನ್ನುವ ವೇದಿಕೆಯನ್ನು ಸ್ಥಾಪಿಸಿ ಇಲ್ಲಿಯವರೆಗೆ 212 ತಿಂಗಳ ಕಾರ್ಯಕ್ರಮವನ್ನು ಆಯೋಜಿಸಿದ ಬೆಂ ಶ್ರೀ ರವೀಂದ್ರ ಅವರು ಈಗಾಗಲೇ 'ಇಬ್ಬನಿ ಹನಿ' ವಚನಗಳ ಸಂಗ್ರಹವನ್ನು ಹೊರತಂದಿದ್ದು ಈಗ ಮತ್ತೊಂದು ಮುಕ್ತಕಗಳ ಸಂಗ್ರಹ ಕೃತಿಯನ್ನು ಹೊರತರುತ್ತಿರುವುದು ಶ್ಲಾಘನೀಯ.

ರವಿತೇಜ ಎಂಬ ಶಿರೋನಾಮೆಯನ್ನು ಬಳಸಿ ಬರೆದ ಈ ಮುಕ್ತಕಗಳನ್ನು ಓದುತ್ತಾ ಹೋದಂತೆ ಇಡೀ ಜಗತ್ತಿನ ಆಗುಹೋಗುಗಳು, ಬದುಕು-ಭಾವನೆಗಳು, ಕ್ರೀಡೆ – ಕಸರತ್ತುಗಳು, ಮೃಗ – ಪಕ್ಷಿಗಳು, ಸಂಸ್ಕೃತಿ – ಸಂಸ್ಕಾರಗಳು, ಒಲವು – ಗೆಲವುಗಳು ಹೀಗೆ ಪ್ರತೀ ಸಾರವೂ ಒಂದೊಂದಾಗಿ ಸುರುಳಿ ಸುರುಳಿಯಾಗಿ ತೆರೆದುಕೊಳ್ಳುತ್ತವೆ.

ಜನನದಿಂದ ಮರಣದವರೆಗಿನ ಹಾದಿಯಲ್ಲಿ ಕರ್ಮಗಳು ಅನಿವಾರ್ಯ. ಈ ಕರ್ಮಗಳನ್ನು ವಿವೇಕಯುಕ್ತವಾಗಿ ಮಾಡಬೇಕು ಎಂದು ಹೇಳುವುದೇ ಧರ್ಮ. ಧರ್ಮ ಮತ್ತು ಅಧ್ಯಾತ್ಮದ ದಾರಿಯಲ್ಲಿ ನಡೆಯುವವರಿಗೆ ಕಲ್ಲು ಮುಳ್ಳುಗಳು ಎದುರಾಗುತ್ತಿರುತ್ತವೆ. ಅದು ಹೋಗುತ್ತಲೂ ಬರುತ್ತಲೂ, ಕೊಯ್ಯುವ ಎರಡು ಅಲಗಿನ ಗರಗಸ. ನಮ್ಮ ದಾರಿಯು ಅಂತಹುದೇ ಆಗಿರುವುದರಿಂದ ಕಷ್ಟಗಳು ಎದುರಾಗುವುದು ಸಹಜ. ಅದನ್ನೆಲ್ಲಾ ಧೈರ್ಯವಾಗಿ ಎದುರಿಸುವ ತಾಕತ್ತು ನಮ್ಮಲ್ಲಿದ್ದರೆ ಸಾಗುವ ಹಾದಿ ಅಷ್ಟೇನೂ ಕಷ್ಟವಾಗದು. ಮಾನವನಲ್ಲಿರುವ ನ್ಯೂನತೆಯೆಂದರೆ ತನ್ನಲ್ಲಿ ಅಡಗಿರುವ ದೈವ ಶಕ್ತಿಯನ್ನು ಮರೆತು ತನ್ನ ಕರ್ಮಕಾಂಡವನ್ನು ಹೆಚ್ಚಿಸಿಕೊಳ್ಳಲು ಹಾತೊರೆಯುತ್ತಿರುತ್ತಾನೆ. ಅದಕ್ಕೆಂದೇ ಕವಿ ಈ ರೀತಿ ಬರೆದಿದ್ದಾರೆ.

ಗಾಯವು ಮಾಗುವುದು ವೈದ್ಯದಲಿ
ಮನದ ಗಾಯಕೆ ಬೇಕು ವಿಶ್ವಾಸ ವಿದ್ಯೆಯಲಿ
ಮಿಗಿಲೆಲ್ಲದಕೂ ದೈವಕೃಪೆ ಲೇಪನವು ರವಿತೇಜ

ನಾವಿರುವ ಈ ಜಗತ್ತು ಒಂದು ರಂಗಸಜ್ಜಿಕೆಯಂತೆ, ನಾವೆಲ್ಲ ಪಾತ್ರಧಾರಿಗಳು. ಪ್ರತಿಯೊಬ್ಬರಿಗೂ ಅವರದೇ ಆದ ಪ್ರವೇಶ ಮತ್ತು ನಿರ್ಗಮನವಿರುವುದು. ಒಬ್ಬೊಬ್ಬರ ಪ್ರವೇಶ ಒಂದೊಂದು ರೀತಿ. ಒಬ್ಬರ ಪ್ರವೇಶ ಕ್ಲಿಷ್ಟಕರವಾದರೆ, ಇನ್ನೊಬ್ಬರ ನಿರ್ಗಮನ ಸುಖದಾಯಕ. ಒಟ್ಟಾರೆ ಎಲ್ಲವೂ ಕರ್ಮಾಕ್ಕನುಸಾರವಾಗಿ ಇರುತ್ತದೆ. ಹೀಗೆ ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಹಲವಾರು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಬದುಕಿನಲ್ಲಿ ಕೆಟ್ಟದ್ದು ಅಥವಾ ಒಳ್ಳೆಯದು ಯಾವುದೂ ಇಲ್ಲ. ಅದು ನಮ್ಮ ಯೋಚನೆಯ ಮೇಲೆ ನಿರ್ಧಾರವಾಗುತ್ತದೆ. ಹಲವು ಶತಮಾನಗಳಿಂದ ಕೋಣೆಯೊಳಗೆ ಹುದುಗಿದ ಕತ್ತಲೆ ಒಂದು ದೀಪ ಹಚ್ಚಿದೊಡನೆ ಮಾಯವಾಗುವ ಹಾಗೆಯೆ ಭಗವಂತನ ಕೃಪಾದೃಷ್ಟಿಯೊಂದು ಹಲವು ಜನ್ಮಗಳ ಅಜ್ಞಾನವನ್ನು ಓಡಿಸುವುದು.

ಹುಟ್ಟು ಸಾವುಗಳು ಅವನ ಕೈಯಲ್ಲಿ
ನಡುವಿನ ಭೋಗ - ಭಾಗ್ಯ ನಮ್ಮ ನಡೆಯಲ್ಲಿ
ಬದುಕಿರಲಿ ಅರಿವ ಹರಿವಿರಲಿ ರವಿತೇಜ

ಎಂದು ಕವಿ ನಮ್ಮ ಅಧೀನದಲ್ಲಿರದ ಈ ನಾಲ್ಕು ದಿನದ ಬದುಕಿನ ಬಗ್ಗೆ ವರ್ಣಿಸಿದ್ದಾರೆ .

ಪ್ರತೀ ಬೆವರಿನ ಹನಿ ಕ್ಷಣಗಳನ್ನು ಕಾಯಾ- ವಾಚಾ-ಮನಸಾ ಪರಿಶುದ್ಧವಾಗಿಟ್ಟುಕೊಂಡು ನಮ್ಮ ತನು-ಮನ-ಧನಗಳನ್ನೆಲ್ಲ ನಿಜ ಗುರಿಯತ್ತ ಉಪಯೋಗಿಸಿ ಜನ್ಮ ಸಾರ್ಥಕಮಾಡಿಕೊಂಡರೆ ಉತ್ತಮ. ನಾವು ಕರುಣೆಯನ್ನೇ ಮರೆತುಕೊಂಡಿದ್ದೇವೆ. ಇತರರಿಗೆ ಕರುಣೆ ತೋರಿದಾಗ ಮಾತ್ರ ಕೃಪೆಯು ನಮ್ಮೆಡೆಗೆ ಹರಿದು ಬರುವುದು.

ನಾವು ಮಾಡುವ ಒಂದು ಸಣ್ಣ ಕೆಲಸವೂ ಸಮಾಜದ ಮೇಲೆ ದೊಡ್ಡ ಪರಿಣಾಮವನ್ನೇ ಬೀರಬಹುದು. ನಮಗೆ ಸಮಾಜದ ಪ್ರತಿ, ಇತರರ ಪ್ರತಿ, ಎಲ್ಲ ಜೀವಿಗಳ ಪ್ರತಿ ಕರ್ತವ್ಯವಿದೆ. ಸಹನೆಯೊಂದಿದ್ದರೆ ಜೀವನದ ಎಲ್ಲ ರಂಗಗಳಲ್ಲೂ ಸಫಲತೆ ಸಾಧಿಸಬಹುದು ಎನ್ನುವುದಕ್ಕೆ ಈ ಕೆಳಗಿನ ವಚನವು ಸೂಕ್ತವಾಗಿದೆ.

ಮಂತ್ರದಲುದುರದು ಮಾವಿನಕಾಯಿ
ನಿರುತ ಕರ್ಮದ ತಪವು
ಬಯಕೆ ಸಂಪದವು ರವಿತೇಜ

ಈ ಭೂಮಿಯ ಮೇಲೆ ಮಾನವನಾಗಿ ಜನ್ಮ ತಾಳಿದ ಮೇಲೆ ಮನುಷ್ಯ ಬದುಕಲೇ ಬೇಕು. ಬದುಕುವುದೂ ಒಂದು ಧರ್ಮ. ಎಲ್ಲರೂ ಬದುಕುತ್ತಾರೆ. ಪ್ರಾಣಿ, ಪಕ್ಷಿ ಚರಾಚರ ಜೀವಿಗಳೂ ಬದುಕುತ್ತವೆ. ಎಲ್ಲಾ ಜೀವರಾಶಿಗಳಿಗಿಂತ ಮಾನವ ವಿಭಿನ್ನ. ಆತ ಬುದ್ಧಿಜೀವಿ, ಹೃದಯದ ತುಡಿತ,ಬಡಿತಗಳನ್ನು ಅರ್ಥಮಾಡಿಕೊಳ್ಳುವವ, ಹಾಗಾಗಿ ದಯೆ, ಕರುಣೆ, ಮಾನವೀಯತೆ, ಬುದ್ಧಿ, ಶಕ್ತಿ, ಯುಕ್ತಿ, ಎಲ್ಲವನ್ನೂ ಆತನಲ್ಲಿ ತುಂಬಿದ್ದಾನೆ. ಭಗವಂತ. ಮಾನವೀಯ ಮೌಲ್ಯದ ಅರುಹು – ಕುರುಹು ಉಳಿದಿರಬೇಕು.

ತೆರೆದ ಜಗವಿದು ತೆರೆದಿರಲಿ ಮನ
ತರತರದವಕಾಶ ತೆರೆತೆರೆಯಲಿ
ವಿವೇಚನೆಯಿರಲಿ ಆಯ್ಕೆಯಲಿ ರವಿತೇಜ

ಎಂದದ್ದು ಸೂಕ್ತವಾಗಿದೆ. ಇಲ್ಲಿ ಪ್ರೀತಿ, ದ್ವೇಷ, ತ್ಯಾಗ, ಅಸೂಯೆ, ಮತ್ಸರಗಳೆಂಬ ಬೀಜಗಳು, ಅದೇನೇ ಬಿತ್ತಿದರೂ ಫಲ ಕೊಡುತ್ತವೆ. ಹಾಗಾಗಿ ಯಾವುದನ್ನು ಬಿತ್ತಬೇಕೆಂಬುದನ್ನು ನಿರ್ಧರಿಸಬೇಕು, ಬಿತ್ತಿದಂತೆ ಫಲ ನಮ್ಮದಾಗುವುದು ಎನ್ನುವುದು ಮಾತ್ರ ಸತ್ಯ, ಎಲ್ಲದಕ್ಕೂ ಸಾಧನೆಯೇ ಮುಖ್ಯ, ಸಾಧನೆಯ ಗೆಲುವು ದುಡಿಯುವ ಕೈಗಳಿಂದ ಬರುತ್ತವೆಯೇ ಹೊರತು ಅಂಗೈಯ ಅದೃಷ್ಟ ರೇಖೆಗಳಿಂದ ಖಂಡಿತ

ಅಲ್ಲ ಎನ್ನುವ ಸತ್ಯವನ್ನು ನಾವು ಮನವರಿಕೆ ಮಾಡಿಕೊಂಡರೆ ಚೆನ್ನ. ಜೀವನದಲ್ಲಿ ಏನೂ ಇಲ್ಲವೆಂದು ಕೊರಗಬಾರದು.ಏನೂ ಇಲ್ಲದಿರುವಾಗ ತಾಳ್ಮೆಯಿಂದ ಇರಬೇಕು, ಹಾಗೆಯೆ ಎಲ್ಲವೂ ಸಿಕ್ಕಿದಮೇಲೆ ವಿನಯವೇ ಮುಖ್ಯವಾಗಿರಬೇಕು.

ಸಿಟ್ಟು ಸೆಡವುಗಳು ದು:ಖ –ದುಮ್ಮಾನಕೆ ದಾರಿ
ಸಂಯಮದ ಗಡಿ–ನುಡಿ ಮುರಿಯದಿರಲಿ
ಸಹೃದಯ ಸ್ಪಂದನವು ಜೀವ ನಂದನವು ರವಿತೇಜ

ರವಿತೇಜ ಅವರ ದೃಷ್ಟಿ ಕೇವಲ ಜೀವನಕ್ಕೆ ಮಾತ್ರ ಸಂಬಂಧ ಪಟ್ಟವುಗಳಾಗಿರದೆ, ಸಮಾಜ, ಸಾಹಿತ್ಯ , ಕ್ರೀಡೆ, ವಿಶ್ವ ಸಮರ, ಪೌರಾಣಿಕ ಸತ್ಯಗಳು, ಸೃಷ್ಟಿ, ಪರಿಸರ, ಪ್ರೀತಿ – ಮಮತೆ, ದೇಶವನ್ನು ಆಳಿದ ಪರಕೀಯರು, ಮುಖವಾಡದ ಮನುಷ್ಯನ ಬಹುತೇಕ ವೇಷಗಳು, ಅಲ್ಲದೆ ಧಾರ್ಮಿಕ ಸತ್ಯ ಹೀಗೆ ಪ್ರತಿಯೊಂದು ವಿಚಾರಗಳ ಬಗ್ಗೆಯೂ ಅಂತರಾತ್ಮವನ್ನು ಜಾಲಾಡಿಸಿ,ಚುಟುಕು ರೂಪದಲ್ಲಿ ಬರೆದವುಗಳಾಗಿವೆ. ಇವರ ಚುಟುಕುಗಳಲ್ಲಿ ಹಲವಾರು ಹೊಸ ಶಬ್ದಗಳಿದ್ದು ಅವುಗಳ ಅರ್ಥವನ್ನು ಕೊಟ್ಟದ್ದು ಓದುಗರಿಗೆ ಅರ್ಥೈಸಿಕೊಳ್ಳಲು ಮತ್ತು ಜ್ಞಾನಾರ್ಜನೆಗೆ ಸಹಾಯಕವಾಗಿವೆ. ಈಗಿನ ಕಂಪ್ಯೂಟರ್, ಅಂತರ್ಜಾಲ ದಿನಗಳಲ್ಲಿ ಕೂಡ ಒಂದಷ್ಟು ಚಿಂತನೆಗೆ, ವಿವೇಚನೆಗೆ ಒಡ್ಡುವ ಮುಕ್ತಕಗಳನ್ನು ರಚಿಸಿ ಓದುಗರೆದುರಿಗೆ ಇಟ್ಟಿರುವ ಶ್ರೀ ಬೆಂ ಶ್ರೀ ರವೀಂದ್ರ ಅವರಿಗೆ ಅಭಿನಂದನೆಗಳು. ಬದುಕಿನ ಹೆಜ್ಜೆಗಳಲ್ಲಿ ಯಾವುದು ಸರಿ ,ಯಾವುದು ತಪ್ಪು ಎಂದು ತಿಳಿಯದೆ ಕಸಿವಿಸಿಗೊಳ್ಳುತ್ತಿರುವ ಪ್ರೌಢ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಈ ಮುಕ್ತಕಗಳು ಸಹಾಯವಾಗಬಹುದು ಎಂದು ನನ್ನ ನಂಬಿಕೆ. ಮುಂದೆಯೂ ಇವರಿಂದ ಇಂತಹ ಅರ್ಥಪೂರ್ಣ ಹಾಗೂ ಮೌಲ್ಯಯುಕ್ತ ಬರಹಗಳು ಮೂಡಿ ಬರಲಿ ಎಂದು ಆಶಿಸುತ್ತೇನೆ.

೫.೫.೨೩ **ಶಾರದಾ ಎ.ಅಂಚನ್ ಕೊಡವೂರು**

ನಂಬಿಕೆಗಿರಲಿ ತರ್ಕದಾಧಾರ
ತರ್ಕಕೆ ಸಕಾರಣವೇ ಆಧಾರ
ಸಕಾರಣಕೆ ತೆರೆದಮನವಾಧಾರ ರವಿತೇಜ //001//

ಸತ್ಯಾಸತ್ಯಕೆ ನಿಕಷವಾವುದು
ಪೂರ್ವಾಗ್ರಹ ಕಳೆದ ದೃಷ್ಟಿಯೆ ಸಂಪತ್ತು
ವಿವೇಚನೆಯ ಬುದ್ಧಿಯೆ ಬೆಳಕು ರವಿತೇಜ //002//

ಬೆಂಕಿಗಿಂ ಬಲು ಬಿಸಿಯು ನಾಲಿಗೆಯು
ಸುಟ್ಟು ಬಿಡುವುದು ಹೊಗೆಯುರಿಯಿಲ್ಲದೆ
ತಪ್ಪದಿರೆ ಬೇಯಿಪುದು ಆಡಿಸಿದವನನೆ ರವಿತೇಜ //003//

ಬಿಡಿಸಬಹುದೇನು ಆತ್ಮದರಿವಿನ ಗಂಟು
ಕತ್ತಲೆಯಲಿ ಕರಿಬೆಕ್ಕಿನ ಕಣ್ಣಂತೆ ಮಿಂಚೀತೆ
ಹೆಜ್ಜೆಯ ಸಪ್ಪಳ ಕೇಳಿತೆ ರವಿತೇಜ //004//

ಬಿದ್ದ ಹನಿ ಎದ್ದ ಹನಿ
ಸೇರುವುದು ಸಾಗರದ ಖನಿ
ಮಧ್ಯೆ ಬಳ್ಳದ ತುಂಬಿ ಬನಿ ರವಿತೇಜ //005//

ಸ್ಪರ್ಧಿಯಾರ್ ನಿನಗೆ ಈ ಜಗದಿ
ನಿನಗೆ ನೀನಲ್ಲದೆ ಅವರಿವರು
ಹಾದಿಯ ತೋರುಗಂಬಗಳು ರವಿತೇಜ //006//

ಛಲವಿರಲಿ ಗೆಲುವಲ್ಲಿ ಅಚಲವಿರಲಿ ಕೆಳೆಯು
ಸಹಸ್ಪರ್ಧೆಯಲಿ
ಹದಮನದ ಪಟುತನವು ಹದುಳಿಗಗೆ ರವಿತೇಜ //007//

ಜಠರವಿರೆ ಹಿಡಿಯಷ್ಟು
ಬಯಕೆಯೇಕೆ ಬಾಂದಳದಷ್ಟು
ಹಂಚುಣ್ಣುವ ಸವಿಯೆ ಸಂಪದವು ರವಿತೇಜ //008//

ಹಲುಬದಿರು ನನಗೆಂದು
ತಡೆ ಹಕ್ಕಲು
ಹಂಚಿ ಹಗುರಾಗು ರವಿತೇಜ //009//

ಹಕ್ಕಲು= ಕಣದಲ್ಲಿ ನಷ್ಟವಾಗುವ ಆಹಾರ ಧಾನ್ಯ

ಮುಗ್ಗರಿಸೆ ಮುಗಿಯಿತೆನಬೇಡ
ಅಗ್ಗವಲ್ಲವೀ ಬದುಕು
ಸತತ ಯತುನವೆ ಯಶಕೆ ದಾರಿ ರವಿತೇಜ //010//

ಬವಣೆಯನೆಂತು ಹಣಿಯುವುದು
ಭವದ ಹೊಣೆಯದಾಗಿರಲು
ದೈವಸಾಂಗತ್ಯವೆ ಹೆಗಲಣೆಯಾಗುವುದು ರವಿತೇಜ //011//

ಕೈಚೆಲ್ಲದಿರು ಅವನದೆಲ್ಲವೆಂದು
ಕೈಕೂಡಿಸುವನು ಪ್ರಯತ್ನಶೀಲನಿಗೆ
ಕೈಗೂಡುವುದು ಸಾಧಕನಿಗೆ ರವಿತೇಜ //012//

ಮಡಿವ ಶರೀರಕೆ ಕಣ್ತುಂಬ ನಿದ್ದೆ
ಕಾಯಕ್ಕೆ ಕಾಯಕವೆ ಅಕ್ಕರವು
ಶ್ರಮಕೆ ತಕ್ಕ ಫಲವು ರವಿತೇಜ //013//

ಯಾರು ಮೆಚ್ಚಿದರೇನು ತನ್ನ ತಾ
ಮೆಚ್ಚಬೇಕು ತನ್ನನ್ನು ತಾನರಿವಂತೆ
ಬೇರಾರು ಅರಿವರು ರವಿತೇಜ //014//

ಸೂಕ್ಷ್ಮ ಬಂಧ ಭಾವಗಳನೊಡನಾಡು
ಜಾಗರದ ಎದೆಮಿಡಿತಗಳಿಂದ
ತರ್ಕ ವಿತರ್ಕದ ತಕ್ಕಡಿಯಿಂದಲ್ಲ ರವಿತೇಜ //015//

ವೈಜ್ಞಾನಿಕ ತಥ್ಯ ಅಪಥ್ಯವಾಗದಿರಲಿ
ಮೌಢ್ಯಗಳ ನಿಕಷಕ್ಕೊಡ್ಡಿ ಸತ್ಯವರಿ
ಕಣ್ತೆರೆದು ರವಿತೇಜ //016//

ಅಕ್ಕಿಯಲನ್ನವನು ಕಂಡಂತೆ
ಚಕ್ರದಲೋಟವನು ಕಂಡಂತೆ
ಕಾಂಬುವುದು ಜಗ ತೆರೆಗಣ್ಣಿರಲು ರವಿತೇಜ //017//

ತಿಳಿಸುಣ್ಣವ ಪಾಲೆಂದು ತಿಳಿಯುವರೆ
ನಂಬಿಕೆಯನಿಡುವ ಮುನ್ನ ನಿಕಷಕ್ಕೆ ಒಡ್ಡು
ನಂಬಿಕೆಯ ಇಂಬು ಆಗದಿರಲಿ ಅಂಬು ರವಿತೇಜ //018//

ಬಸಿಯುತ್ತ ಭಸ್ಮವಾಗುವ ಊದುಬತ್ತಿ
ತನ್ನ ತಾನುರಿಸುತ್ತ ಸಾರ್ಥಕವಾಗುವುದು
ಕೆಂಡದ ಬೆಳಕಿನಲಿ ರವಿತೇಜ //019//

ವಯವೇರಿತೆಂದು ಮುಪ್ಪನಪ್ಪದಿರು
ಹರೆಯ ಹಿಗ್ಗುವುದು ಮನದೋತ್ಸಾಹದಲಿ, ಕಸುವು
ಕಿಲುಬಾಗದು ಜೀವಪ್ರೀತಿಯಲಿ ರವಿತೇಜ //020//

ಬೀಸಿದರೆ ಬ್ಯಾಟನ್ನು ಹಾರದು ಮೈದಾನದಾಚೆ
ಕಾದು ಸಮಯಕ್ಕೆ ಹೊಡಿ ಗೆಲುವ ಬುತ್ತಿಗೆ
ಚಿಂತನಾನುಭವದೊಡನೆ ಸಮಯ ಸ್ಫೂರ್ತಿಯು ರವಿತೇಜ //021//

ಹೂವಿನಲಿ ಕಾಣದು ನೀರು ಹೀರುವ ಬೇರು
ತಳಿಗೆಯಲಿ ಕಾಣದು ನೇಗಿಲಯೋಗಿಯ ಬೆವರು
ಒಳಗಣ್ಣಿ ಬೆಳಕು ಬೇಕು ಬಾಳಪಥಕೆ ರವಿತೇಜ //022//

ನಿಜಕೊಂದಾದರೆ ಸುಳ್ಳಿಗೆ ದಾರಿ ನೂರು
ಕಾಲನೊರೆಗಲ್ಲು ಯಜ್ಞದಲಿ
ನಿಜ ಮೆರುಗಾದರೆ ಸುಳ್ಳು ಕೆಡಕು ರವಿತೇಜ //023//

ಬೇಕು ಎಚ್ಚರಿಕೆ ಸೂಕ್ಷ್ಮ ನಡವಳಿಕೆ
ಜೀವನದ ಜೇಡರಬಲೆಯಲಿ
ತಪ್ಪಿದರೆ ಜೇಡಂಗೆ ನೀ ತುತ್ತು ರವಿತೇಜ //024//

ನಾಕವಿಲ್ಲಿದೆ ನರಕವಿಲ್ಲಿದೆ
ನಮ್ಮೊಳಗಿನರಿಯನರಿಯಲು
ನಾವಿಕನೆಮ್ಮ ಮನವು ರವಿತೇಜ //025//

ಗಮ್ಯದಷ್ಟೆ ಗಮನವಿರಲಿ ಹಾದಿಯಮೇಲೆ
ಬದುಕ ಬಟ್ಟೆಯು ಸ್ವಚ್ಛವಿರಲಿ; ತಂತಾನೆ
ಗೊನೆ ಬಾಗುವುದು ಮಡಲಿಗೆ ರವಿತೇಜ //026//

ಯಾರು ನಿನ್ನವರೆಂದು ಕಣ್ತೆರೆದು ನೋಡು
ಸವಿಯಾರೋಗಣೆಯೊ ಕಹಿ ಗುಳಿಗೆಯೊ
ಬಯ್ದು ಬಾಳಲು ಹೇಳಿದವರನರಿ ರವಿತೇಜ //027//

ಕಠಿಣವಿರಲಿ ಮನವು ಸುಮದಂತೆ ಕೋಮಲವು
ಕ್ಷಮೆಯ ಅಂಬರವಿರಲಿ ಸ್ಖಾಲಿತ್ಯಕೆ
ಹದವಿರಲಿ ಅವನಿತ್ತ ಬಾಳು ರವಿತೇಜ //028//

ಹಸಿವಿನ ತಿಮಿರವು ಬಲು ಕೆಡಕು ನೋಡಾ
ಬೆಳೆದ ಕಾಳು ಭಗವಂತನ ಹಸಾದವು
ಹಂಚುಣ್ಣುವ ಸುಖಕೆ ಒಡ್ಡಿಕೊಳೊ ರವಿತೇಜ //029//

ನಾನು ದೊಡ್ಡವನೆಂಬ ಭಾವವದು ಹೊಲ್ಲ
ಜೊತೆಗೂಡಿದವರ ಕೈಹಿಡಿದು ನಡೆಸು
ಸಹಜೀವನವು ಆನಂದದೋಲಗವು ರವಿತೇಜ //030//

ನೋವು ನಲಿವುಗಳು ಹಗಲು ರಾತ್ರಿಗಳಂತೆ
ನಲಿವಿನಲಿ ನೋವಂತೆ ನೋವಿನಲಿ ನಲಿವು
ಅಂಟಿಅಂಟದೆ ಸಮಭಾಗಿಯಾಗು ರವಿತೇಜ //031//

ಸಂಸಾರ ಸುಖ ದುಃಖ ಸಮೀಕರಣದ
ಸಂಯೋಜಕನವನು, ಸಂತೈಸಿ ಮನವ
ಸಮರ್ಪಿಸು ಸಪ್ರೇಮದಿ ಬದುಕು ರವಿತೇಜ //032//

ಶ್ರಮವಿರ ಬೇಕು ಸಗ್ಗಕ್ಕೆ
ಕಾಯಕವೆ ಬೆಳಗು
ಪುಣ್ಯ ನಿಷ್ಕಾಮಕರ್ಮದ ಫಲ ರವಿತೇಜ //033//

ಅವರಿವರ ಮೆಚ್ಚಿಗೆಯು ಅಹಮಿನ ಮೇವು
ಬಯಸಲಾತ್ಮ ಶುದ್ಧಿಯನೆ ಮೆಚ್ಚಿಸು
ನಿನ್ನೊಳಗುಡಿಯ ದೇವರನೆ ರವಿತೇಜ //034//

ಮುಳ್ಳಿನಲಿ ಬಿದ್ದ ವಸ್ತ್ರ
ಹೊರತೆಗೆದ ಕಿರ್ಪಾನು ಅಸ್ತ್ರ
ಸವುಡು ಸೂತ್ರದಲಿ ಬಿಡಿಸು ರವಿತೇಜ //035//

ಗಾಯವು ಮಾಗುವುದು ವೈದ್ಯದಲಿ
ಮನದ ಗಾಯಕೆ ಬೇಕು ವಿಶ್ವಾಸ ವಿದ್ಯೆಯಲಿ
ಮಿಗಿಲೆಲ್ಲಕೂ ದೈವಕೃಪೆ ಲೇಪನವು ರವಿತೇಜ //036//

ಬದಲಾವಣೆಯು ಬದುಕಿನಲಿ ಸ್ಥಿರವು
ಸೆಟೆದು ನಿಂದರೆ ಸಟೆಯಲಿ
ಮೌಢ್ಯದಾ ಮೋಡ ಅಮರುವುದು ರವಿತೇಜ //037//

ಅವರಿವರ ಆಹಾರ ನಮಗೆ ವಿಷವಿರಬಹುದು
ನಮಗೇನು ಬೇಕೆಂದರಿಯಲು ಅರಿ
ಕರುಳಿಗೆ ಅರಿಯೇನೆಂದು ರವಿತೇಜ //038//

ಕಣದಲಿ ಭತ್ತ ಗುಡಿಯಾಗುವುದು
ಕುಟ್ಟಲು ಅಕ್ಕಿ ತವುಡಿಂದ ಹೊರಗಾಗುವುದು
ಕಾರ್ಪಣ್ಯದಲಿ ಕರ್ಮಕರಗಿ ಆತ್ಮ ಬೆಳಗುವುದು ರವಿತೇಜ //039//

ದಧೀಚಿಯಿತ್ತನು ಬೆನ್ನುಮೂಳೆಯ ಲೋಕ ಕಲ್ಯಾಣಕೆ
ಗರಳವ ಹೀರಿ ನೀಲಕಂಠನಾದನು ಶಿವ ಲೋಕಹಿತಕೆ
ಗಳಹದಿರು ಕೊಟ್ಟೆನೆಂಬ ಲೊಳಲೊಟ್ಟೆ ರವಿತೇಜ //040//

ಜಗದ ನಡೆಯೊಳಗೆ ಇಹುದೆಲ್ಲ ಒಳಿತು
ಇಂದು ಕೆಡುಕೆನಿಪುದು ನಾಳೆ ಒಳಿತು
ತರ್ಕನೇಮದಲಿ ನಡೆವುದೀ ಪ್ರಕೃತಿ ರವಿತೇಜ //041//

ಸಂತೈಸು ಭಾವವನು ಓಲೈಸು ಭಾಷೆಯನು
ಸಂತಸದಿ ಒಲಿವನು ಶಿವನು
ಚರಿತ ಕುಸುರಿಯ ಕಲೆಯು ರವಿತೇಜ //042//

ವಿನೀತವು ಕೆಚ್ಚಿನ ನವನೀತವು
ಮುರಿಯದೆ ಕರಗದೆ ಮೇಲೇಳವುದು
ತಾಳಿ ಬಾಳುವ ನಗೆ ಬೆರಗು ರವಿತೇಜ //043//

ಹುಡುಕದಿರು ಸಗ್ಗವನು ಮುಗಿಲ ಮಾಡಿನಲಿ
ತಪಿಸಿ ತಣಿಸು ತನುಮನವನಿಲ್ಲಿ
ಪರದ ವರವಿದು ಉಸಿರು ಬೆಳಗಿಸಿಲ್ಲಿ ರವಿತೇಜ //044//

ಮರುಹುಟ್ಟೆಂಬುದನರಿಯೆವು
ಈ ಹುಟ್ಟೆ ಸವಿಬೆಳಕು
ದೈವವಿತ್ತುಸಿರ ಗೆಲಿಸು ರವಿತೇಜ //045//

ಕಂಬಳಿಹುಳ ಧ್ಯಾನಿಸಿ ಪತಂಗವಾಗುವುದು
ಬೆವರು ಬಿತ್ತಿದರೆ ಬಂಗಾರವಾಗುವುದು
ಮನವ ಮಥಿಸಿ ಮಾದೇವನಾಗು ರವಿತೇಜ //046//

ಪ್ರೇಮದ ಪರಿಪಾಕ ಪರಮ ಪ್ರಸಾದ
ಮೇಲು ಕೀಳೆಣಿಸದೆ ಜೀವ ನಿರ್ಜೀವವೆಣಿಸದೆ
ಸೃಷ್ಟಿಯನಪ್ಪುವುದೆ ಒಪ್ಪು ರವಿತೇಜ //047//

ಕಡೆಗೋಳಿಸು ಚಿತ್ತದಿ ನವನೀತಕೆ
ಕದಡದಿರು ಚಿತ್ತವ ಭಾವಾವೇಶಕೆ
ಕಡೆದು ಕದಡದ ಚಿತ್ತ ಸಚ್ಚಿದಾನಂದಕೆ ರವಿತೇಜ //048//

ಮಾತು ಮಾತಲಿ ಮಹಲು ಕಟ್ಟುವುದು
ಕನಸುಗಳಿಗೆ ಬಣ್ಣದ ಚಿತ್ತಾರ ಚೆಲ್ಲುವುದು
ಮುಸಿಚರಗ ಬದುಕು ಬರಡು ರವಿತೇಜ //049//

ಹೊಗಳಿಕೆಗೆ ಬಾಯ್ತೆರೆದು
ಹಾರಕ್ಕೆ ಕೊರಳ ಚಾಚಿ ಬಾಚಲಾರೆ
ನೆನಪಿಡು ಚಿರಸುಖವ ರವಿತೇಜ //050//

ಬೇಡ ಸೃಷ್ಟಿ ಸೌಭಾಗ್ಯವೆನದೆಂಬ ಹಮ್ಮು
ಪಯಣಿಗನಾಗನು ದೋಣಿಯ ಯಜಮಾನ
ಎಲ್ಲ ನಿನದೆಂಬ ಸೌಜನ್ಯ ಸುಖವು ರವಿತೇಜ //051//

ಭವ ದಾಟಲು ಪರಬ್ರಹ್ಮನೂರುಗೋಲು
ಭವಿಷ್ಯದ್ಗಳಿಕೆಗೆ ಸಚ್ಚಿಂತನೆಯು ಮೇಲು
ಲೋಕ ಹಿತದೊಳಗೆ ನಿನ್ನುನ್ನತಿಯು ರವಿತೇಜ //052//

ಹುಡುಕು ಸತ್ಯವನು ಮನದಂಗಣದಿ
ಭಂಗುರದ ಬ್ಯಾಹ ತಮಟೆಯಲ್ಲ
ಒಳಗಿರುವ ಒಳಿತನರಳಿಸು ರವಿತೇಜ //053//

ಬೇಕು ಬೇಕೆಂಬುದಕೆ ಬಾಂದಳವೆ ಮಿತಿಯು
ಕೊನೆಯಿರದ ದಾಹಕ್ಕೆ ಸ್ವಾರ್ಥವೆ ಮೊನೆಯು
ತನ್ನಳವಿನಲಿ ತಾನಿರಲು ಮನಕೆ ಸುಖವು ರವಿತೇಜ //054//

ವ್ಯಷ್ಟಿಯೆಂಬುದು ಸುಖದ ನೀರ್ಗುಳ್ಳೆಯು
ಸಮಷ್ಟಿಯು ಕೈಜೋಡಿಸಿದ ಕೈಲಾಸವು
ಮನವನನುಗೊಳಿಸುವುದೆ ಸಾಧನೆಯು ರವಿತೇಜ //055//

ಕೂಡಿಬಾಳು ಸ್ವರ್ಗಸುಖವೆಂದಿದೆ ಗಾದೆ
ಒಟ್ಟಿನ ಭಟ್ಟಿಯಲಿ ಅರಳು ಇಲ್ಲದೆ ತಗಾದೆ
ಎಲ್ಲರೊಳಗೊಂದಾಗಿ ಬೆಳಗು ರವಿತೇಜ //056//

ಬೆಳಕಿನೊಳು ಕತ್ತಲೆಯು ಕತ್ತಲೆಯಲಿ ಬೆಳಕು
ಸಹಜದಲಿ ಸಗ್ಗವಿರಲು
ಹಿಗ್ಗು ಕುಗ್ಗಿನ ಜಗ್ಗಾಟವೇಕೆ ರವಿತೇಜ //057//

ಹುಟ್ಟು ಸಾವುಗಳು ಅವನ ಕೈಯ್ಯಲ್ಲಿ
ನಡುವಿನ ಭೋಗ ಭಾಗ್ಯ ನಮ್ಮ ನಡೆಯಲ್ಲಿ
ಬದುಕಿರಲಿ ಅರಿವ ಹರಿವಿನಲಿ ರವಿತೇಜ //058//

ಛಲವಿರಲಿ ಸತ್ಯಶೋಧಕೆ
ವಾದವಿರಲಿ ತತ್ತ್ವಬೋಧಕೆ
ಪ್ರವಚನವಿರಲಿ ಸುಜ್ಞಾನ ಪ್ರಸರಣಕೆ ರವಿತೇಜ //059//

ಸತ್ಯವೆಂಬುದೊಂದು ಬೆಳಕ ಕಿರಣ
ಬಳುಕದೆ ಬಾಗದೆ ದಾರಿ ತೋರುತ ನೇರ
ಅನಂತಕೆ ನಡೆವ ಸಾವಿರದ ಶಕ್ತಿಯೂಟೆ ರವಿತೇಜ //060//

ಸತ್ಯಕೆ ಎದುರಾಗೆ
ಭೀತಿಯ ತಿಮಿರವಳಿಯುವುದು
ಕನಸಿಗೆ ಕಣ್ಣು ಮೂಡುವುದು ರವಿತೇಜ //061//

ಸಾವನುರಿಸುವ ಸಾಸಿರ ಮಾರ್ಗ
ಅರಸಿತ್ತು ಮತ ಮಾರ್ಗ
ಮರೆತು ನಡೆನುಡಿಯೈಕ್ಯತೆಯ ಧರ್ಮ ರವಿತೇಜ //062//

ನುರಿಸು= ತರಬೇತಿ ನೀಡು

ಜ್ಞಾನದೇವಿಯ ಮುಂದೆ ಅನುಭಾವ ದೀವಿಗೆಯು
ಸ್ವಭಾವಫಲ ನೈವೇದ್ಯವು
ಅಭ್ಯಾಸಗಳ ಹೂಮಾಲೆ ರವಿತೇಜ //063//

ಮುಗುಳ್ನಗೆಯು ಮೊಕದಿಡುಗಂಟು
ನಿನ್ನ ಚರಿತವು ಮುಮ್ಮಕ್ಕಳಿಡುಗಂಟು
ಕಾಣದಿಡುಗಂಟು ಅಂತರಂಗದ ಭಕ್ತಿ ರವಿತೇಜ //064//

ಭೌತಿಕ ಬೆಳೆಯಷ್ಟೆ ಭವದ ಹಿರಿಮೆಯಲ್ಲ
ಭವಭಂಗುರವ ಮಥಿಸಿ ಭವಮಾಂತ್ರಿಕನ
ಗರಿಮೆಯ ಅರಿವುದು ಹಿರಿಮೆ ರವಿತೇಜ //065//

ಶಬ್ದಿಸುವ ರೇಖೆಗಳಲ್ಲ ಅಕ್ಷರವು
ಭಾವಾರ್ಥ ಪ್ರೀತಿಯ ಕಣಜವದು
ಉಸಿರಾಡುವನಂತ ರೇಖೆಗಳವು ರವಿತೇಜ //066//

ಎಲ್ಲೆಗಳೆನೆಳೆಯದಿರು ಬೆಳೆವ
ಬದುಕಿನ ಕಲ್ಪವೃಕ್ಷಕ್ಕೆ ಏರದಿರೆ
ದೊರೆಕೀತೆ ಎಳನೀರು ರವಿತೇಜ //067//

ಬೋನಪಾರ್ಟೆ ಅಡಾಲ್ಫ ಅಲೆಕ್ಸರು
ಗೆದ್ದರೇನು ತೋಳ ತೋರಿ, ಬುದ್ಧ
ಕ್ರಿಸ್ತರು ಗೆದ್ದರು ತೋಳ ತೆರೆದು ರವಿತೇಜ //068//

ಅರಿತು ಬೆಳಕಾಗು ಅರಳಿ ಪುರುಳಾಗು
ಅಂಜದೆ ಅರ್ಥೈಸು ಜಗದ ತೊಡಕು
ಮನದ ಭಾವಿಯ ಜಲದ ಕಣ್ಣಾಗು ರವಿತೇಜ //069//

ಕೋರದಿರು ತಾಪಗಳು ಬಾರದಿರಲೆಂದು
ಪಾಪಗಳನವು ತಣಿಪುದು ನಲಿವಿಂ
ಹಗಲು ರಾತ್ರಿಯು ಸಮಚಿತ್ತದೊಡಲಿಂ ರವಿತೇಜ //070//

ಹೊರಳದೆ ಅತ್ತಿತ್ತ ಚಂಚಲಿಸದ ಚಿತ್ತ
ಬೆಸೆದೆರಡು ಚುಕ್ಕೆಗಳ ಸರಳರೇಖೆ
ಆಗಲೆಮ್ಮುಸಿರು ಭಾಗ್ಯರೇಖೆ ರವಿತೇಜ //071//

ಸುಳ್ಳಿನೊಡ್ಡಲೋಗದಲಿ ಅಧರ್ಮಾಧಿಪತ್ಯವಿರೆ
ಕಟ್ಟಲು ಕಡಲನೊರೆಯಿಂ ಮರಳಿನರಮನೆ
ಸತ್ಯಚ್ಯುತಿಯೊ ಜೀವನದಿ ರವಿತೇಜ //072//

ಸಂಸಾರಕ್ಕಾಗಿ ಸಂಪಾದನೆಗಳೆ ಸಾಕು
ಸಂಪತ್ತಿಗೆ ಪ್ರಾರ್ಥಿಸಬೇಡ
ದೃಷ್ಟಿಯಿಂದ ನಿನ್ನನು ರಂಗನಾಥ ॥73॥

ಸಜ್ಜನ ವಿದ್ಯಾವಂತನಾದ ಅಜ್ಞಾನ
ಸಜ್ಜನಿಯಾಜ್ಞೆಯಿಂದ ಮಾಡಲ
ಸತ್ಯ ಜ್ಞಾನದಿಂದ ಮಾಡಿದರೆ ರಂಗನಾಥ ॥74॥

ಮನಸ್ಸು ಮನೆಯಲ್ಲ
ಅಜ್ಞಾನದ ಆಚಾರವು
ಸಂಸ್ಕಾರದ ಸತ್ಯಾರ್ಥವು ರಂಗನಾಥ ॥75॥

ಸತ್ಯ ಮಾಡಿದರು ಮಾಡು ನಿನ್ನ ಕಾಲದ ಸತ್ಯ
ಸತ್ಯ ಮಾಡಿದರು ರಾಜ ನಿನ್ನೆದರು ಮಾಡು
ಅಂತರಂಗದ ಶುದ್ಧಿಯಿಂದ ಒಳಗಿನ ಮಾತಿಗೆ ರಂಗನಾಥ ॥76॥

ಉತ್ಸಾಹ ಉದ್ದೇಶ ವಿವೇಕದಿಂ ಕೂಡಿ
ಎರಿಳಿಯದ ಚಿತ್ತವೃತ್ತಿಯಿಂದಾತ್ಮನಲಿ
ಮನವಿರಿಸೆ ಬದುಕು ಸಮೃದ್ಧಿ ರವಿತೇಜ //077//

ಇಷ್ಟಗಳ ಕೇಳಿ ಕಷ್ಟಗಳು ಬಾರವು
ಕಷ್ಟದ ಭಾರವಿಹುದೆದೆಯೊಳಗೆ
ಗಟ್ಟಿಗುಂಡಿಗೆಯಲಿ ಕರಗುವುವು ರವಿತೇಜ //078//

ಕಾಲಂಗೆ ಕಾಲಕಟ್ಟಲಹುದೆ
ಕಾಲಂಗೆ ಕಿರೀಟವಿಡಲುಂಟೆ
ಅವ ನಿರ್ಲಿಪ್ತ ನಿರಾಕಾರ ನೇಮಿ ರವಿತೇಜ //079//

ಸರಿ ತಪ್ಪುಗಳ ತೂಗು ತೊಟ್ಟಿಲಾಡುವುದು
ಮನದಾಳದಲದಕೆಂದೆ ದಾಸರು ಹಾಡಿದರು
ಇಂದಿನ ದಿನವೇ ಶುಭದಿನವೆಂದು ರವಿತೇಜ //080//

ಬಾಂಧವ್ಯಕೆ ವಿಶ್ವಾಸವೆ ಭರವಸೆಯು
ಅನುಮಾನದ ಗೆದ್ದಲದು
ಕರುಳನ್ನುಣ್ಣುವ ಕ್ರಿಮಿಯು ರವಿತೇಜ //081//

ಜಗದ ಗುಟ್ಟು ಬಿಡಿಸುವ ಕಲೆ ವಿಜ್ಞಾನ
ಹೊಸ ವಸ್ತುವಿಲ್ಲಿಲ್ಲ, ಶ್ರದ್ಧೆಯಲರಸು
ತೂಗುವುದು ಶ್ರಮದ ಫಲವು ರವಿತೇಜ //082//

ಸಂಕಲ್ಪ ಶಕ್ತಿಯಲಿ ಅಡಗಿಹವು
ವಿಜಯ ಕಲ್ಪಗಳು ಸಾಮು ಮಾಡದೆ
ಸ್ನಾಯುಗಳು ಬಲಿಯುವುವೆ ರವಿತೇಜ //083//

ಆತ್ಮಶೋಧನೆಯ ಬೆಳೆ ಹಂಚುತಲಿ
ಆತ್ಮಸ್ಥೈರ್ಯ ಕೈಂಕರ್ಯದುತ್ಸಾಹದಲಿ
ನಡೆಯಲಿ ನಿನ್ನೊಡನೆಲ್ಲರ ಪ್ರೀತ್ಯೋತ್ಸವ ರವಿತೇಜ //084//

ಹಿಂದಣದರಿವಿನ ಬೆಳಕು ನೆನಪುಗಳು
ಮುಂಗಾಣ್ಕೆಯ ತೋರ್ದೀಪ ಕನಸುಗಳು
ಸ್ಮೃತಿ ಸ್ವಪ್ನಗಳೊಡಲ ಕುಡಿ ನನಸು ರವಿತೇಜ //085//

ನಿನ್ನೆದೆಯ ಗಾಯಕ್ಕೆ
ಅವರಿವರನೆತ್ತಾಡೆ ಸಿಗದು ಸಾಂತ್ವನವು
ಕ್ಷಮೆ ದಯೆಯೇ ಕ್ಷೇಮಾಭ್ಯುದಯವು ರವಿತೇಜ //086//

ಮಾತು ತುಟಿ ಜಾರುವ ಮುನ್ನ
ಯೋಚಿಸು ಚಣಕಾಲ ಇದೆಷ್ಟು ಚೆನ್ನ
ಆಗದಿರಲಿ ಜಗದೆದಿರು ಬನ್ನ ರವಿತೇಜ //087//

ಬನ್ನ= ಅವಮಾನಿತನಾಗು

ವಿಶ್ವದಿ ಸತತ ಪ್ರವಹಿಪ ಶಕ್ತಿ ಕ್ಷಣಕ್ಷಣ
ಬದಲಾಗಿ ಪಡೆದು ಹೊಸಲಕ್ಷಣ
ಸಂಜೀವಿನಿಯಹುದು ಜೀವಜಾಲಕೆ ರವಿತೇಜ //088//

ಜಗವುಂಟು ಎಲ್ಲೆಡೆಯು
ಅದರರ್ಥ ಬಿಡಿಸುವುದು
ನಿನ್ನ ಕಾಣ್ಕೆ ರವಿತೇಜ //089//

ಹರಿವ ನೀರು ನೆಲದೊಳಗೆ ಸಂಭ್ರಮಿಸಿ
ಅರಳುವುದು ಜೀವಕ್ಕೆ ನೆರವಾಗಿ
ನಿಂತದ್ದು ಕೊಳೆವುದು ಎರವಾಗಿ ರವಿತೇಜ //090//

ಸತ್ಕಾರ ಪೂತ್ಕಾರ ಚೀತ್ಕಾರಗಳ ಎಣಿಸದೆ
ಆಕರಗಳ ಗಣಿಸಿ ಶ್ರೀಕಾರವಿಕ್ಕು ಸತ್ಕಾರ್ಯಕೆ
ಸಕಾರದಿಂ ಸಾಕಾರ ಫಲವು ರವಿತೇಜ //091//

ಗೆಲ್ಲೆಂಬ ಗೆಲ್ಲು ತಲೆಯಾನಾವರಿಸದಿರಲಿ
ಸೋಲೆಂಬ ಸೊಲ್ಲು ಸೂಡಿಯನಾರಿಸದಿರಲಿ
ಏರಿಳಿತ ಜೀವನದಟ್ಟುಣಿಸು ಸವಿ ರವಿತೇಜ //092//

ಜೀವನದಟ್ಟುಣಿಸು= ಜೀವನದ + ಅಟ್ಟು+ ಉಣಿಸು

ಹಸಿವಿರದಿರಲಿ ದಾಹಕ್ಕೆ ಮೋಹಕ್ಕೆ ಕ್ರೋಧಕ್ಕೆ
ಹಸಿವಿರಲಿ ಜ್ಞಾನಕ್ಕೆ ಅಕ್ಕರಕೆ ಬೆವರಹನಿಗೆ
ಹಸಿವಿನರ್ಥವ ಬಿಡಿಸಿ ಬಲ್ಲಿದನಾಗು ರವಿತೇಜ //093//

ಅಟ್ಟುಂಡರೆ ಸವಿಯು ದುಂತುಂಡರೆ ಕಹಿಯು
ಬೆವರ ಹನಿ ತಣಿಯೊಳಗೆ ತಂಪು ಮನ
ಶ್ರಮವೆ ಸೊಗ ಜೀವನಯೋಗ ರವಿತೇಜ //094//

ಧ್ರುವದಿ ಕಡುಚಳಿ ಮರುಭೂಮಿಯುರಿ
ಸಮಭಾಜಕದತ್ತಿತ್ತ ಬಿಸಿ ಬಿರುಮಳೆಯು
ಬೇಕು ಬುವಿಯ ಸಮಸ್ಥಿತಿಗೆ ರವಿತೇಜ //095//

ಬಿದ್ದಲ್ಲಿ ಏಳುವುದು ಬೀಜದ ಗುಣ
ಮೇಳೈಸಿಕೊಂಡು ಮಣ್ಣೊಳು ತನ್ನತನ
ಇಳಿದೇರುವುದು ಅರಿವು ಕಣ ರವಿತೇಜ //096//

ದಶಲಕ್ಷ ಮೈಲಾಚೆ ವ್ಯೋಮ ಪರಿಭ್ರಮಣದಿ
ಜಗಕಾಂಬ ಜೇಮ್ಸ್‌ವೆಬ್ ದೂರದರ್ಶಕವು
ಕಾಂಬುದೆ ಮನುಜನಂತರಂಗ ರವಿತೇಜ //097//

ಜೇಮ್ಸ್‌ವೆಬ್ ದೂರದರ್ಶಕ = ಭೂಮಿಯಿಂದ 1.5 ದಶಲಕ್ಷ ಕಿಮೀಗಳಾಚೆ, ಸೂರ್ಯನನ್ನು ಆವರ್ತಿಸುತ್ತಿರುವ ಶಕ್ತಿಯುತ ದೂರದರ್ಶಕ

ಎದೆಯೊಳು ಗುರುವಿರಲು
ಬೇರೆ ಅರಸುವಿಯೇಕೆ ಎದೆಗುದಿಯ
ಆಲಿಸುವ ಮನವಿರಲಿ ರವಿತೇಜ //98//

ಏನನರಸಲು ಬಂದೆ ಭವಕೆ
ಕಾಗದವ ಚೆನ್ನವಾಗಿಸಿದ ಮಾಯಾಜಾಲಕೆ
ಜೋಗರಿಸು ಅಕ್ಷರಾನ್ನವ ಅನುಬಂಧಕೆ ರವಿತೇಜ //99//

ಬುದ್ಧಿ ಕೈಕಾಲನು ಭೇದವೆಣಿಸದೆ ಇತ್ತಿಹನು
ಬಳಸುವಾ ಬಗೆಯನು ನೀನೆಣಿಸಬೇಕು
ಬೆವರಹನಿಗೆ ತಕ್ಕಷ್ಟು ಬಾನಿಯಲಿ ಬನಿ ರವಿತೇಜ //100//

ತಿಳಿಗೊಳದಲೆಯ ನಿಧಾನದಾಟ
ಪ್ರಕ್ಷುಬ್ಧ ಸಾಗರದ ದೈತ್ಯ ಮೇಲಾಟ
ಸಾರಿದೆ ಬಾಳಿನೇರಿಳಿತ ಸಾಜದಾಟ ರವಿತೇಜ //101//

ಸಾಜದಾಟ= ಸಹಜದ ಆಟ

ಹೊರಗಿನಾ ಥಳಕು ಹಾಕದು ತಳಕು
ಹೊಸವೇಷಕ್ಕೆ, ಬದುಕಿನಾ ಸಾಳಗವು
ನಿತ್ಯ ಹೊಸತಿನ ಬೆರಗು ರವಿತೇಜ //102//

ಸಾಳಗ=ಹೊಂದಾವಣಿಕೆ

ಮುಳ್ಳಿರುವುದು ಹೂವ ರಕ್ಷಿಸಲು
ಕತ್ತಲೆಯಿಂದಲೆ ನಕ್ಷತ್ರ ಹೊಳೆಯುವುದು
ಕಾಕ ಸಾಕಿದರೂ ಪಿಕ ಕುಹೂ ಎನ್ನುವುದು ರವಿತೇಜ //103//

ಅಟ್ಟವೇರದಿದ್ದರೂ ಸ್ವಶ್ರಮವೆ ಸುಖವು
ಅಡ್ಡದಾರಿಯು ಆತ್ಮನಾಶನವು
ಅಶನಕೆ ವ್ಯಸನದ ಹಾದಿಯು ಸಲ್ಲ ರವಿತೇಜ //104//

ನೀತಿಯೊಳಿಹುದು ಉಸಿರ ರೀತಿ
ನೀತಿ ಮನದ ನವನೀತವು
ಕಡೆಗೋಲಾಡೆ ತೇಲುವುದು ರವಿತೇಜ //105//

ಪಕ್ಷಿಯುಗುರಲಿ ಹಿಡಿದು ಕೊಕ್ಕಲಿ ಕಚ್ಚಿ
ಹಣ್ಣನುಂಡೆಸೆದ ಬೀಜ
ಮೊಳತೇಳುವುದು ಬೆರಗಲ್ಲವೇ ರವಿತೇಜ //106//

ಅಸ್ತಿ ಸಂಚಯನವಾಗುವಾಗ
ಆಸ್ತಿ ಪರರ ಪಾಲಾಗುವುದು
ವಾಸ್ತವದ ತಿಳಿವಿರಲಿ ರವಿತೇಜ //107//

ಮೊಳೆತು ಚಿತ್ತದಲಿ ಬೆಳಗು ಸಂಕಲ್ಪದಲಿ
ಬಲಿತು ಶ್ರದ್ಧೆಯಲಿ ಯಶವು ಶ್ರಮದಲಿ
ಕಾರ್ಯಸಾಧನೆ ಆಲಸಿಯ ತುತ್ತಲ್ಲ ರವಿತೇಜ //108//

ಬೇಕು ಬೇಕೆಂಬಾಸೆಯನುಣಿಸದಿರು
ದಾವರದ ಮರಕೆ ತೃಪ್ತಿಯೆಂಬ ದೇವರ
ಹೂವರಳುವುದೆಂದು ಭ್ರಮಿಸಿ ರವಿತೇಜ //109//

ಬಂಧ ಬಿಗಿಯಿರಬೇಕು ಇಡಲು
ತಿರಿಯಲಕ್ಷರದ ಕಾಳು ತೀರಸೇರಲು
ತೀರದ ಪರಿಶ್ರಮವಿರಬೇಕು ರವಿತೇಜ //110//

ತಿರಿ= ಹುಲ್ಲಿನದಾರ

ಜೀವನದ ಸುಖ ಆಡಿದ ನುಡಿಯಲಿಲ್ಲ
ತೊಟ್ಟ ಕಿರೀಟದಲಿ ಬಿಟ್ಟ ಬಾಣದಲಿಲ್ಲ
ಜಗಹಿತಕೆ ದುಡಿದ ಶ್ರಮದಲಿ ರವಿತೇಜ //111//

ಮಂತ್ರದಲುದರದು ಮಾವಿನಕಾಯಿ
ನಿರತ ಕರ್ಮದ ತಪವು
ಬಯಕೆ ಸಂಪದವು ರವಿತೇಜ //112//

ವ್ಯೋಮಕಮರಿಯಲಿ ಇಹುದಂತೆ
ಬೆಳಕಿರಣ ಬಂದಿತೆಲ್ಲಿಂದ ಹುಡುಕು
ಹುಡುಕು ಚಿತ್ತದ ಬೆಳಕು ರವಿತೇಜ //113//

ಸಮುದ್ರದುಪ್ಪಿಗೆ ಸಕ್ಕರೆಯನೀವ ನದಿಯ
ಹಸಿರಹಾಸಿನ ಹಾದಿಯ ಚಮತ್ಕಾರದಲಿ
ಬೇಡದೆ ನೀಡುವ ಸಿರಿವಂತಿಕೆಯು ರವಿತೇಜ //114//

ಸುಳ್ಳು ಬೂದಿಯಾಯಿತಲ್ಲ ವರುಣ ಬರಲಿಲ್ಲ
ಗಾಳಿ ಬೆಂಕಿಯು ಕುಣಿಯಿತಲ್ಲ
ಸೀತೆ ನಿಜದಾಕಾಶದಲಿ ಬೆಳಗಿದಳಲ್ಲ ರವಿತೇಜ //115//

ತಪಬೇಕು ಮಂತ್ರವಾಗಲು ಮಾತು
ಬೆಳಗಿ ಜಗದ ಬತ್ತಿ ಎಚ್ಚರದಿ ನುಡಿ
ಅದು ಎರಡು ಅಲಗಿನ ಕತ್ತಿ ರವಿತೇಜ //116//

ತಮ್ಮರಿವಿನಲಿ ತಮ್ಮೊಳಗಿನರಿಯನರಿತು
ಬೆಳಕ ಸಗ್ಗಕೆ ಮರಳಲು ಬೇಗ ಬೇಡಿದರು
ಜಯ ವಿಜಯರು ಮೂರುಜನ್ಮದ ದ್ವೇಷ ರವಿತೇಜ //117//

ಭಿನ್ನ ವೇಷವು ಭಾಷೆ
ಭಿನ್ನ ಚರ್ಮದ ಬಣ್ಣ
ಒಳ್ನುಡಿಯ ಬೆಳಕೊಂದೆ ರವಿತೇಜ //118//

ಬೆಳೆ ನಿನ್ನಿಚ್ಛೆಯಂತೆ ಪರರ ನೋಯಿಸದೆ
ಮನದನಿಯ ಧಣಿಯಾಗು ದಣಿಯದೆ
ಸಮಷ್ಟಿಯೊಳಿಹುದು ವ್ಯಷ್ಟಿ ಸುಖ ರವಿತೇಜ //119//

ಕೌರವನ ತೊಡೆ ತೊಡೆಯಲು ಭೀಮಗೆ ಕಿಚ್ಚು
ಅರ್ಜುನನ ತೇಜ ಕರ್ಣಗೆ ಕಿಚ್ಚು
ತಾರತಮ್ಯವನರಿ ರವಿತೇಜ //120///

ಜಗವಿಟ್ಟ ಈ ಹೆಸರು ಜಗದಲಿಟ್ಟು ಹೋಗು
ಆದಿ ಅಂತ್ಯವಿಲ್ಲದ ಕಾಲನ ಹಾಸಿನಲಿ
ನಲಿದು ಹಸನಾಗಿ ಹೋಗು ರವಿತೇಜ //121//

ಮುಗಿಲು ಮುಟ್ಟುವ ಮರವು
ನೆಲಜಲದ ಗರಿಯು
ಮೆರೆವುದಾಕಾಶದಲಿ ರವಿತೇಜ //122//

ಅಂಕಿ ಸಂಖ್ಯೆಯಲಿ ಅಕ್ಷರವನಳೆಯದಿರು
ಅನಂತದೊಡಗೂಡಿ ಅಕ್ಷರವು ನಡೆದಿಹುದು
ಅನಿಕೇತನವು ಅಕ್ಷರದಾಟ ರವಿತೇಜ //123//

ಗಂಟು ಕಗ್ಗಂಟು ಹಾದಿಗುಂಟವೆನ್ನದಿರು
ಕಟ್ಟು ಬಿಚ್ಚುಗಳದನು ಸುಭದ್ರ ಸರಾಗೆಕೆ
ಸಮಚಿತ್ತ ವಿವೇಕವದರ ಒಳಗುಟ್ಟು ರವಿತೇಜ //124//

ನೋವಾಗದಂತಿತರರಿಗೆ
ತನ್ನೊಳು ತನ್ನಿಚ್ಛೆಯಂತೆ
ಇರುವ ಋಜುತ್ವವು ನಿನ್ನ ರುಜುವು ರವಿತೇಜ //125//

ಮೆಚ್ಚು ಚುಚ್ಚುಗಳು ಕೊಚ್ಚು ಬೆಚ್ಚುಗಳು
ಕಚ್ಚಾಗದೆ ನಚ್ಚಿನಲಿರಲಿ ನಿನ್ನ ಋಜುವಲಿ
ಮನಬಿಚ್ಚೆ ಆಗುವುದು ಸವಿ ಹೆಚ್ಚು ರವಿತೇಜ //126//

ಎದೆಗುದಿಗೆ ತಿದಿಯೊತ್ತದಿರು
ಎದೆ ಮಿಡಿವನಾಲಿಸಿ ಹಿತವಿರೆ ಹಿಗ್ಗು
ಎಡರಿದ್ದರದನೆದುರಿಸು ರವಿತೇಜ //127//

ತೆರೆದ ಜಗವಿದು ತೆರೆದಿರಲಿ ಮನ
ತರತರದವಕಾಶ ತೆರೆತೆರೆಯಲಿ
ವಿವೇಚನೆಯಿರಲಿ ಆಯ್ಕೆಯಲಿ ರವಿತೇಜ //128//

ಅಂಕಿ ಸೊನ್ನೆಯ ಗುಣಕ ಸೊನ್ನೆ
ಸೊನ್ನೆ ಒಂದರೊಡನಾಡೆ ಗಣಕನುಡಿ
ಸೊನ್ನೆಯೆ ಪರಮಾರ್ಥದಿ ಮಿಗಿಲು ರವಿತೇಜ //129//

ಮರಣವಿಲ್ಲವು ಚರಾಚರಕೆ
ಬದಲಾಗಿ ಮತ್ತೆ ಬರುವುದು ಜಗಕೆ
ತೇದಂತೆ ಗಂಧ ಘಂ ಎನ್ನುವುದು ರವಿತೇಜ //130//

ಬೀಸುಕಲ್ಲಿನಲಿ ಹುಡಿಯಾದ ಕಾಳು
ರೊಟ್ಟಿಯಾಗಿ ಮೇಲೇಳುವುದು
ಜಗದಲಿ ಬದಲಾವಣೆಯೇ ಶಾಶ್ವತವು ರವಿತೇಜ //131//

ಶ್ರಮಕೆ ಸಾಟಿಯು ಅನ್ನವಕ್ಷರವು
ಇರುವಗೆ ಇಲ್ಲದವಗೆ ಹಸಿವು ಸಮವು
ಕೊಕ್ಕೆಯಿಲ್ಲದೆ ಗಾಳಕೆ ಮೀನು ಸಿಕ್ಕೀತೆ ರವಿತೇಜ //132//

ತಟ್ಟಿ ಕರೆದ ತೊಡೆ ಎರಡಾಯ್ತು
ನೀತಿಗೆ ಬಾಗಿ ಧರ್ಮ ಸಿಂಹಾಸನವಾಯ್ತು
ಮಿಗಿಲಾಯ್ತು ಎಲ್ಲಕ್ಕೂ ಅವಲಕ್ಕಿ ರವಿತೇಜ //133//

ಚಿತ್ತಕ್ಕೆ ಹಬ್ಬ ವರ್ತಮಾನದ ಕುಬ್ಬ
ತೊರೆ ಕಾಳುದೇಹ ನಾನೆಂಬ ಭ್ರಮೆಯ ಹುಬ್ಬ
ಸ್ವಸ್ಥದೇಹದೊಳಿಹುದು ಸ್ವಸ್ಥಮನ ರವಿತೇಜ //134//

ಕಾಳುದೇಹ= ಸಾವಿನತ್ತ ಸಾಗಿರುವ ದೇಹ

ಲವಾಜಮೆ ಹದವಿರಲು
ಅಮ್ಮನ ಪಾಕ ಹದವು
ಹದವಳಿಯೆ ಕಹಿಪಾಕ ರವಿತೇಜ //13

ಹಾಡುವನು ಕವಿ ಹುಣ್ಣಿಮೆಯ ಹಾಲ್ಬೆಳಕು
ಮರೆತದು ರವಿ ಚಂದ್ರಂಗಿತ್ತ ದಾನವೆಂದು
ಅರಿವಿರಲಿ ಅವರವರಿಗವರ ಸ್ಥಾನ ರವಿತೇಜ //136//

ಹರಿವ ಝರಿಗೆ ಸುಮ್ಮನಡ್ಡಗಟ್ಟಲು ಬೇಡ
ತೋಡಿಡು ಕಾಲುವೆಗಳ ಹೊಲಗದ್ದೆಗೆ
ಸಂಯೋಜನೆಯಲಿರಲಿ ಸಮ್ಯಕ್ಕು ರವಿತೇಜ //137//

ಉಳ್ಳವನೆಂಬ ಹಮ್ಮಿನಲಿ ಉಳದಿರೆ
ಉಡಲು ಉಣಲು ಉಡಿ ತುಂಬದು
ದುಡಿಮೆಯಕ್ಕರವಾಗಲಿ ರವಿತೇಜ //138//

ಮೇಲುಕೀಳೆಂಬುದು ಬಿರುಮನದ ಕಸವು
ಸೃಷ್ಟಿಯ ಕಣವೆಲ್ಲ ರಸವು
ತೆರೆಯೊಳಗಣ್ಣು ಸಂಚಯಿಪುದು ಕಸುವು ರವಿತೇಜ //139//

ಕಲ್ಲೆಸೆವ ತರಳಂಗೆ ಭುಸ್
ಸೊಲ್ಲೆಸೆವ ತರಳೆಗೆ ಹುಶ್
ತಿಳಿಗೊಳದ ಮನಕೆ ಖುಷ್ ರವಿತೇಜ //140//

ಆಸೆಯ ಕುದುರೆಗೆ ಬಿಗಿ ಲಗಾಮು
ಸಮಗತಿಯಿಲ್ಲದಿರೆ
ಸವಾರ ಧೂಳನಪ್ಪುವ ರವಿತೇಜ //141//

ಬುದ್ಧನ ಮಂದಸ್ಮಿತದ
ಗೋಪನ ಕೊಳಲಗಾನದ
ಅರ್ಥ ಕಡೆದರೆ ಮನದೀಪ್ತವು ರವಿತೇಜ //142//

ಪಾರ್ಥಂಗೆ ಕಂಡಿದ್ದು ಹಕ್ಕಿ ಕಣ್ಣು
ಕರ್ಣಂಗೆ ತೋರಿದ್ದು ಅಂಗರಾಜ್ಯದ ಹಣ್ಣು
ಗುರಿಯಿಲ್ಲದ ನೆಲೆ ಹುಡಿಮಣ್ಣು ರವಿತೇಜ //143//

ಇರುವ ದೈವವ ಕಾಣದೆ
ಬೇರೊಂದು ಸೃಷ್ಟಿಸಿ ಮನುಜ
ರಕ್ತದೋಕುಳಿಯಾಡುವನು ರವಿತೇಜ //144//

ಕುಂಟನ ಸಂಚು ಕುರುದೊರೆಗೆ ಕುತ್ತು
ಅರಿಯನರಿಯದ ಮತ್ಸರದ ಕಿಚ್ಚು
ತಿಳಿಮನದ ವಿಕರ್ಣಗೆ ಸತ್ಯವೇ ಮೆಚ್ಚು ರವಿತೇಜ //145//

ತರತಮಿ ಇಂದ್ರಂಗೆ ಕರ್ಣ ಕವಚವು
ಅಸುರ ಸಂಹಾರಕೆ ದಧೀಚಿ ಬೆನ್ನೆಲಬು
ದಾನಿಗಿರಬೇಕು ಪಾತ್ರಾಪಾತ್ರ ವಿವೇಕ ರವಿತೇಜ //146//

ಕಟ್ಟಲಾಗದು ಬದುಕು ಗಾರೆ ಇಟ್ಟಿಗೆ
ರಸಮಟ್ಟಗಳಲಿ, ಬಾಗಿ ಬಳುಕುವ
ಚಿಗುರು ಬೆಳಕ ಹೀರಿ ಬೆಳೆವುದು ರವಿತೇಜ //147//

ಹುಟ್ಟು ಸಾವುಗಳ ಮೂಲವೊಂದೆ
ಬಾಂದಳವು ಬದುಕು ಈ ನಡುವಿನಿಂದೆ
ಹಿಂದೆ ಮುಂದೆಣಿಸಿ ತೋರುಗತಿ ರವಿತೇಜ //148//

ಒಳಿತು ಕೆಡಕುಗಳ ಅಳೆದು ನೋಡು
ಸರ್ವಹಿತ ಸಾಧನೆಯ ಮಾಡು
ತಿಳಿಮನದಲರಳುವುದು ಸವಿ ರವಿತೇಜ //149//

ಬಾಗಿದರೆ ಬಸವಳಿಯುವೆ
ಏಗಿದರೆ ಏರನೇರುವೆ
ಮಾಗಿ ಎಳೆದರೆ ರಥ ಸುಗಮ ರವಿತೇಜ //150//

ನಿರ್ಭಯದಿ ನಚಿಕೇತನಂತಾಗು
ನಂಬಿ ಪ್ರಹ್ಲಾದನಂತಾಗು
ಸಾಧಿಸಲು ಹನುಮನಾಗು ರವಿತೇಜ //151//

ಭಾವಬೆಸುಗೆಯೆ ಸಂಬಂಧ ಸವಿಸೂತ್ರ
ಹರಿದರದನೆ ಒಡಕುದನಿಯ ಖತ್ರ
ಕೂಡಿ ಬೆಳೆ ಕಡಿಯೆ ಕಳೆ ರವಿತೇಜ //152//

ಖತ್ರ= ಸಣ್ಣ ತಬಲ

ವಿಶ್ವದಣು ಕಣವು ಗಣಿತ ಸೂತ್ರದ ಬಂಧಿ
ವಿಜ್ಞಾನ ಸೂತ್ರ ಸಂಬಂಧಿ; ಮನುಜ ಮನ
ಸೂತ್ರಕೆ ನಿಲುಕದ ಭಾವಸಂಬಂಧಿ ರವಿತೇಜ //153//

ಬೇಡದ ಮಾತುಗಳ ತಹತಹಿಸಿ ಆಡುವೆಯೇಕೆ
ನೀನಿರುವೆ ಪ್ರತಿಧ್ವನಿಪ ಕಮರಿಯಲಿ
ಪಿಸುಮಾತೂ ಮಾರ್ನುಡಿದಪ್ಪಳಿಸುವುದು ರವಿತೇಜ //154//

ಕೆಳೆ ಬಂಧು ಬಾಂಧವರ ಕೇಳದಿರು
ಸಾರಲು ನಿನ್ನ ಚರಿತವ
ಪೀನ ನಿಮ್ನ ಸಪಾಟು ಕನ್ನಡಿಯಂತವರು ರವಿತೇಜ //155//

ಇ ಡಿ, ಸಿ ಬಿ ಐ, ಸಿ ವಿ ಸಿಗಳಿಗೆಗಂಜಿ
ಓಡುವ ಕುಳಕಿಂತ ಅಗುಳುಂಡು
ಆರಾಮದಿ ಮಲಗುವುದು ಸುಖವು ರವಿತೇಜ //156//

ಹೆಣ್ಣು ಹೊನ್ನು ಮಣ್ಣಿನದಾಹ
ತಣಿಯುವುದೇ ತರ್ಕದಿಂ
ಕುರುರಾಯ ಕಡೆಗೇನಾದ ರವಿತೇಜ //157//

ಮೇಲು ಕೀಳೆನ್ನದೆ ಗೌರವದ ನುಡಿಯಾಡು
ತರತಮದ ಮಾತು ವಿಷದ ಹೊಗೆಯಂತೆ
ನಿನ್ನನುಡಿಯಿಂ ನಿನಗೆ ಮನ್ನಣೆಯೋ ರವಿತೇಜ //158//

ಸಮಾಜದ ಭಾಗವಾದರೆ ಬೆಳೆವೆ
ಭಾರವಾದರೆ ಮುಳುಗುವೆ
ವೃಂದಗಾನವೆ ವೃಂದಾವನ ರವಿತೇಜ //159//

ಕಿಡಿ ಹಾರುವುದೆಂದು ಸೂಡಿಯನಾರಿಸದಿರು
ಗಾಳಿಬರತವ ಗಮನಿಸು
ಅಪಾಯದಲುಪಾಯ ಆಶ್ರಯಿಸು ರವಿತೇಜ //160//

ಸಹನೆ ಶಕ್ತಿಯು ಹೌದು
ಸಹನೆ ದುರ್ಬಲತೆಯೂ
ಸಂದರ್ಭವನಳೆದು ನಡೆ ರವಿತೇಜ //161//

ಜಿಗಿ ಅನುಕೂಲದಾವರಣ ತೊರೆದು
ಹನುಮ ಲಂಕೆಗೆ ಲಂಘಿಸಿದಂತೆ
ರಾಮನುಂಗುರ ಪಡೆದು ಸೀತೆಗಿತ್ತಂತೆ ರವಿತೇಜ //162//

ಮುದುರೆ ಛಳಿಗೆ ಅಯ್ಯೋ ಬಿಸಿಲೆನೆ
ಬಿರುಮಳೆಯು ಬೇಡವೆನೆ
ಬಾಡುವುದು ಟಿಸಿಲು ರವಿತೇಜ //163//

ನೀನಿರೆ ಜಗವುಂಟು ಎಲ್ಲ ನಿನ್ನೊಳುಂಟು
ನೀನೆ ಜಗವಾಗಿಹೆ ಅರಸದಿರು ಹೊರಗೇನು
ನಿನ್ನೊಳಿಹ ಜಗತತ್ತ್ವವನೆಚ್ಚರಿಸು ರವಿತೇಜ //164//

ಕಾಡದಿರು ಜಗವನ್ನು ಕಾಪಾಡು ಎಲ್ಲವನು
ಸಮೂಹಗಾನದೊಳು ನಿನ್ನ ದನಿಯಿರಲಿ
ಜಗಕಾಗಿ ಬದುಕಿದವರ ನೆನೆವುದು ಜಗವು ರವಿತೇಜ //165//

ಹೆಜ್ಜೆಯನೂರು ಎಚ್ಚರದಿಂದೆ
ಆದುದನು ನೆನೆದು ಕಲಕದಿರು ಕನಲದಿರು
ಅಳಿಯದಿತಿಹಾಸ ನೀನಿಟ್ಟ ಹೆಜ್ಜೆಗಳು ರವಿತೇಜ //166//

ನೋವೊಂದು ಸುಖದ ಅನುಭವವು
ತೋರುತ್ತ ಒಳಗಿನ ನ್ಯೂನತೆಗಳ
ಧೈರ್ಯ ವಿವೇಚನೆಯನೀವುದು ರವಿತೇಜ //167//

ಚಿಂತನೆಗಳಿರಲಿ ಸೂರ್ಯನಂತೆ
ಸುತ್ತಲೂ ಚೆಲ್ಲುತ್ತ ಪ್ರಖರ ಬೆಳಕು
ಬದುಕು ಏಕಮುಖಿ ರಸ್ತೆಯಲ್ಲ ರವಿತೇಜ //168//

ಸ್ಪಷ್ಟತೆಯ ಸಂಪದವಿರಲಿ ಚಿಂತನೆಯಲಿ
ಅನುಭವ ಅರಿವಿನ ಕೊರೆಯುಂಟು ಬದುಕಲ್ಲಿ
ಹಿಮಾಲಯಕೆ ಹಲವು ಮಗ್ಗಲು ರವಿತೇಜ //169//

ಕೊನೆಯಾಯಿತೆಂದು ಕೊರಗದಿರು
ಹೊಸಹಾದಿ ಸುತ್ತ ತೆರೆದಿಹುದು
ಹುಡುಕುವುದಷ್ಟೆ ನಿನ್ನ ಕೆಲಸ ರವಿತೇಜ //170//

ಚಲದಲಿ ಛಲದ ಚೆಲುವಿರಲಿ
ಕಲಿಕೆಯಲಿ ಕಲಿಯ ಕೆಚ್ಚಿರಲಿ
ನಿಚ್ಚಣಿಕೆಯೇರಲು ಗುರಿ ನಿಚ್ಚಳವಿರಲಿ ರವಿತೇಜ //171//

ಬಿಸಿತವೆಯ ಮೇಲೆ ಬಿದ್ದ ನೀರಹನಿಯಂತೆ
ಆವಿಯಾಗುವುದಾಯುಷ್ಯ ಚುರ್ ಕೂಗಿ
ಕಾಲಬರಲೆಂದು ಕಾಯದಿರು ಕಾರ್ಯಕ್ಕೆ ರವಿತೇಜ //172//

ಈಸಬಹುದೆ ಕಡಲಲ್ಲಿ ದಡವೆತ್ತೆಂದೆಣಿಸದೆ
ಜೈಸುವ ಛಲಕೆ ದೀಪದಮನೆ ಬೆಳಕು
ಸಂಚಯಿಸು ಚಲಬಲವ ಗುರಿಯತ್ತ ರವಿತೇಜ //173//

ಎಲ್ಲವೂ ಅವನದೆನ್ನುವ ಮುನ್ನ ಗಣಿಸು
ಅವನಿತ್ತಿಹ ಜ್ಞಾನ ಕರ್ಮೇಂದ್ರಿಯಗಳ
ಅರಿತು ಬಳಸಿದೆಯೇನ್ ಅದರ ಶಕ್ತಿ ರವಿತೇಜ //174//

ಬಸಿರು ಹಸಿರು ಉಸಿರಾದ ಶಕ್ತಿ
ಹಬೆಯಲ್ಲಿ ಯಾಂತ್ರಿಕಶಕ್ತಿ
ಧಬೆಧಬೆಯಲಿ ವಿದ್ಯುಚ್ಛಕ್ತಿ ರವಿತೇಜ //175//

ತೋರುದೀಪಗಳಿಹವು
ಅವಘಡ ತಪ್ಪಿಸಲು
ದಾರಿ ನಿನ್ನಯ ಆಯ್ಕೆ ರವಿತೇಜ //176//

ವಾಹನವಿದೆ ಇಂಧನವಿದೆ
ವಿದ್ಯುನ್ಮಾನ ತಂತ್ರಾಂಶವಿದೆ
ಸಂಕಲ್ಪಶಕ್ತಿಯ ಜೋಡಿಸು ರವಿತೇಜ //177//

ಸಂಕಲ್ಪವೆ ಗೆಲುವು
ಸ್ಫೂರ್ತಿಯಿತ್ತವರೊಲವು
ತರಬೇತಿಯೆ ಬಲವು ರವಿತೇಜ //178//

ಬಾಲ್ಯಕ್ಕೆ ಬಾಲ್ಯವೆನುವರು ಯೌವನಕೆ
ಯೌವನವೆನುವರು ಮುಪ್ಪಿಗೆ ಮುಪ್ಪೆನುವರು
ನಿನ್ನದೆನ್ನುವ ಹೆಸರೆಲ್ಲುಂಟು ರವಿತೇಜ //179//

ನೀನೆಂಬುದೊಂದು ನೀರ್ಗುಳ್ಳೆ
ಹಣ ರೂಪ ಯೌವನ ರಸ ಗಂಧವಲ್ಲ
ಉಸಿರಡಗಿದೆಡೆ ಬೂದಿಯೋ ಮಣ್ಣೋ ರವಿತೇಜ //180//

ಕಾಡಿಗೆಯಿಂದಲ್ಲ ಕಣ್ಣಮಿನುಗಿನಿಂದ
ತುಟಿಯ ಬಣ್ಣದಿಂದಲ್ಲ ಮುಗುಳುನಗೆಯಿಂದ
ಒಳಗಿನ ಹೂರಣದಿಂದ ವ್ಯಕ್ತಿತ್ವ ರವಿತೇಜ //181//

ಕನ್ನಡಿ ಮಸುಕಾಗೆ
ಬಿಂಬ ಸ್ಪಷ್ಟತೆಯಿಹುದೆ?
ಬೆನ್ನಿಗಿಹ ಪಾದರಸ ಪಕ್ಕಾಗಿರಬೇಕು ರವಿತೇಜ //182//

ತೆಳು ಬಿಳಿಮೋಡ ಹಂಜಿಯಂತೆ ಹಾರುವುದು
ಕರಿಗಟ್ಟಿದರೆ ಮಳೆಯಾಗುವುದು
ದೋರೆಗಾಯ್ ಹಣ್ಣಲ್ಲ ಮಾಗಲಷ್ಟೇ ರುಚಿಯು ರವಿತೇಜ//183//

ಅರಿವಿಗಂಚುಂಟೆ ಅದು ತವನಿಧಿಯ
ಅವಸರವಲ್ಲ ಅಳವು ಅದು
ಜೀವನದ ತಿರುಳು ರವಿತೇಜ //184//

ಅಳವು= ಬುದ್ಧಿವಂತಿಕೆ; ಯುಕ್ತಾಯುಕ್ತ ವಿವೇಚನೆ

ಅರಕ್ಕೆ ಏರದಿರು ಮೂರಕ್ಕೆ ಕುಸಿಯದಿರು
ಮಂಡಿಗೆಯ ಅರೆಬೇಯಿಸದಿರು
ಕುದುರಿಸು ಕಣ್ಣಳತೆಯ ರುಚಿಯ ಹದಕೆ ರವಿತೇಜ //185//

ನುಡಿಯಲಳೆಯದಿರು
ನಡೆಬಿಡಿಸಿ ನೋಡು
ಅಸಲಿಗುಟ್ಟು ರಟ್ಟಾಗುವುದು ರವಿತೇಜ //186//

ಅಹಂಕಾರದಲಂಕಾರ ರಂಜಿಸದು
ಉಬ್ಬಿದ ಪುಗ ಪಟ್ ಅನ್ನುವುದು
ವಿನಯವೇ ಚಾರಿತ್ರ್ಯದ ಹೊಳಪು ರವಿತೇಜ //187//

ನಿಕೃಷ್ಟ ಉತ್ಕೃಷ್ಟವಿಲ್ಲ ಕರ್ಮದಲಿ
ಮನೆ ಮಠ ಮಂಡಿ ಮಂದಿಯೊಡನಾಟ
ಸಮಶ್ರದ್ಧೆ ನಂಬಿಕೆಯೆ ಹಿತಸೂತ್ರ ರವಿತೇಜ //188//

ಋವಿ ಶ್ರಾವಣಕೆ ಚಂದ್ರ ಹುಣ್ಣಿಮೆಗೆ
ಬಿಮ್ಮನಿಸೆ ನವಮಾಸಕೆ ಕಾಯ್ವಪರಿ
ಸೈರಣೆಯ ಸವಿಪರ್ವ ರವಿತೇಜ //189//

ಅರಿತೊ ಅರಿಯದೆಯೊ ಕುಂತಿ
ಹಂಚಿಕೊಳ್ಳಿ ಎನಲು ಕಂತಿತೇ
ಅಗ್ನಿಕನ್ಯೆಯ ಕಾಂತಿ ರವಿತೇಜ //190//

ಎಣಿಸು ಗುಣಿಸು ಮಾಳ್ಪ ಕಾರ್ಯವನು
ಗಡಿಬಿಡಿಯಲಿ ನಡೆಯದಿರು
ತಾಳ್ಮೆಯಲಿ ತಾಳೆ ಹಿಡಿ ರವಿತೇಜ //191//

ಬದುಕಲು ಬೇಕು ಹಣ
ಬದುಕು ಸುಂದರವಾಗಲು ಗುಣ
ಸಂಚಯಿಸೆ ಗುಣ ಕೂಡುವುದು ಹಣ ರವಿತೇಜ //192//

ಹಣವು ಮನುಜಮಾಯೆಯ ಕೂಸು
ಆಧುನಿಕರೀಗ ಹಣವೇ ಗುಣವೆಂಬರು
ಹಣ ಗುಣವಾಗಿದ್ದು ಕಾಲಮಹಿಮೆ ರವಿತೇಜ //193//

ತನ್ನ ಕಾಲ ಮೇಲೆ ತಾನಿಹನೆಂದು
ಭ್ರಮಿಪ ಮನುಜನರಿಯನು ಕಾಲ್ಕೆಳಗೆ ಭೂಮಿ
ಮೇಲೆ ಅನಂತ ಆಕಾಶವೆಂಬ ಸತ್ಯ ರವಿತೇಜ //194//

ಚೈತನ್ಯವೊಂದಿರಲದರ ಭಿನ್ನಶಕ್ತಿಗಳು
ಬೆಸೆದಿಹುದು ಒಂದಕ್ಕಿನ್ನೊಂದು ಋಣದಲಿ
ಹಂಗಿಲ್ಲವೆನಗೆಂಬುವರು ನುಡಿಜಾಣರೇ ರವಿತೇಜ //195//

ಭಾರತ ಚೀನಾ ಭಾಯಿ ಭಾಯಿ ಎನ್ನುತ
ಹೊರಗೊಂದ್ ಒಳಗೊಂದ್ ಚೌಎನ್ ಲಾಯ್
ನುಂಗಿದನಲ್ಲ ಅಕ್ಸಾಯಿಚಿನ್ ರವಿತೇಜ //196//

ನುಡಿವ ಮುನ್ನ ಶಬರಿಯ ನೆನೆಸು
ತಾ ಕಚ್ಚಿ ರುಚಿಯರಿತು ರಾಮಂಗಿತ್ತಳು ಹಣ್ಣು
ಅನುಭವವಿಲ್ಲದ ನುಡಿ ರುಚಿಯಿಲ್ಲದಡಿಗೆ ರವಿತೇಜ //197//

ಮಂತ್ರಕುದುರುವುದೇ ಮಾವಿನಕಾಯಿ
ಕುದಿಯೇಳದೆ ಮೆಣಸಿನಪುಡಿ ಬೇಯುವುದೆ
ಬೆವರಬನಿಯಲಿಹುದು ಶ್ರಮ ದಸವಿ ರವಿತೇಜ //198//

ಜಗದಡೊಂಕನೇಕೆ ಎತ್ತಾಡುವೆ
ಸರಿಪಡಿಸಲಾಗದೆ ನಿನ್ನಂಕುಡೊಂಕು
ಮನೆ ಗೆದ್ದು ಮಾರು ಗೆಲ್ಲು ರವಿತೇಜ //199//

ಪಾಪದಲಿ ಪಾಲಿಲ್ಲವೆಂದ ಮಡದಿಯ ನುಡಿಗೆ
ಬುದ್ಧನ ಮಂದಸ್ಮಿತೆಗೆ
ಅರಳಾದ ಅಂಗುಲಿಮಾಲ ರವಿತೇಜ //200//

ಅಶೋಕವನದ ಸೀತೆಗೊಂದೇ ದಾರಿ
ರಾಮನಲಿ ಕಡುನಿಷ್ಠೆ ಅಚಲ ನಂಬಿಕೆಯು
ಮುದ್ರೆಯುಂಗುರದಲಿ ಮುದವರಳಿತು ರವಿತೇಜ //201//

ಸರ್ವವ ಧಿಕ್ಕರಿಸುವ ಸರ್ವಾಧಿಕಾರಿ ರಾಜ್ಯದಿ
ಜ್ಞಾನಿಗಳ ಸೂಳ್ನುಡಿಗೆ ದಿಗ್ಬಂಧನವು
ಸರ್ವಜ್ಞ ತಾನೆಂಬ ಭ್ರಮಿತಗೆಲ್ಲಿ ಗೆಲುವು ರವಿತೇಜ //202//

ನುಣುಪಲ್ಲ ದೂರದ ಬೆಟ್ಟ
ಹಗ್ಗ ಹಾವಲ್ಲ ದಡದಲ್ಲಿ ಕುಳಿತವ
ಈಜು ಕಲಿವನೆ ರವಿತೇಜ //203//

ವಿಕೆಟ್ಟಿಗೆ ಎಸೆಗಾರನ ಹಂಬಲ
ಕ್ಷೇತ್ರ ಗೂಟರಕ್ಷಕರ ಕಪ್ತಾನನ ಬೆಂಬಲ
ಪ್ರತಿಯೊಂದಕದರ ಸ್ಥಾನಗೌರವ ರವಿತೇಜ //204//

ಬೇಕೆನಿಸಿದ್ದನ್ನು ನೀಡದು ಕಣ್ಕಟ್ಟುವಿದ್ಯೆ
ಕಣ್ಣಿಟ್ಟು ಕಣಕಣವ ಜೋಡಿಸಲ್
ಪೂರಣ ಕೂರುವುದು ಕಣಕದೊಳ್ ರವಿತೇಜ //205//

ಕಾಣುವುದೆಲ್ಲ ನಿಜವಲ್ಲ
ಭ್ರಮೆಯ ಪರೆ ಹರಿಯಲು ಬೇಕು
ಒಳಗನಳೆಯಲು ಬೇಕು ರವಿತೇಜ //206//

ಎಲ್ಲಾ ನನದೆಂದು ನನ್ನ ಮಾತೇ ಕೊನೆಯೆಂದು
ನಾ ಸಾಯುವುದೇ ಇಲ್ಲವೆಂಬ ಭ್ರಮೆಯಲಿ
ನಡೆದಿದೆ ರಷ್ಯ ಉಕ್ರೇನ್ ಸಮರ //207//

ಬ್ರಹ್ಮಾಂಡವು ನಿಲ್ಲದೊಂದರೆ ಕ್ಷಣ
ನಾವು ನಿಲುವುದುಂಟೆ ಇತಿಹಾಸವನನುಸರಿಸಿ
ಮುನ್ನೋಟದ ನಡೆ ಬೇಕು ಬದುಕಿಗೆ ರವಿತೇಜ //208//

ಒಂದಲ್ಲ ಒಂದು ದಿನ ಗುಟ್ಟು ಬಯಲಾಗುವುದು
ನಿಲುವೆಯೇನ್ ಇತಿಹಾಸದ ಕಟಕಟೆಯಲ್ಲಿ
ಮುಚ್ಚಿಡದಿರು ವಸ್ತುಸ್ಥಿತಿಯನೀಗ ರವಿತೇಜ //209//

ಸಿದ್ಧವಿರು ಲಕ್ಷ್ಮಿಯ ಸ್ವಾಗತಕೆ
ಮುಚ್ಚದಿರು ಮನಮನೆಯ ಬಾಗಿಲು
ಅವಕಾಶಗಳು ಬಂದಾಗ ಬಾಚಿಕೋ ರವಿತೇಜ //210//

ಎಸೆಗಾರನಾವ ಚೆಂಡನು ಚಿಮ್ಮಿಸುವನೊ
ಬ್ಯಾಟರನು ಗಗನಕ್ಕೆ ಹೊಡೆವನೋ ಬುತ್ತಿಯನು
ವಿಕೆಟ್ಟಿನವಕಾಶ ಎಲ್ಲ ಎಸೆತಕಿರದು ರವಿತೇಜ //211//

ಮಳೆಬರಲ್ ಅರಳುವುದೆ ನಾಸಿಕವು
ಮಣ್ಣವಾಸನೆಗೆ ಮಿಡಿವ ಮನುಜನಾಗೆ
ಅವನಿ ಅವನಿಗಾಗುವಳು ರವಿತೇಜ //212//

ಭೂತಕಾಲದ ಬುತ್ತಿಯನೇಕೆ ಹೊರುವೆ
ಹಳಸಾಗದೆ ನಾಳಿಗಿಂದನು
ಅಣಿಗೊಳಿಸು ರವಿತೇಜ //213//

ಹಿಂದೆ ಇಂತಾಯಿತೆಂದು ಕಳೆಯದಿರು ಕಾಲ
ನಾಳೆ ಅಂತು ಮಾಳ್ಪೆನೆಂದಾಡಿಸದಿರು ಬಾಲ
ಇಂದಿನ ಗತಿಗೆ ಗಮನವಿಡು ರವಿತೇಜ //214//

ಅಬ್ಬರಿಸಿ ಜಬ್ಬರಿಸದಿರು ನಾನೇ ಎಂದು
ನೀನೇನೆಂದು ಎಂತೆಂದು ಅನ್ನುವುದು ಜಗವು
ಹುಂಬಜಂಬದ ಹಂಬುಮುರಿ ರವಿತೇಜ //215//

ಬದುಕು ಹೊಸಹುಡುಕಿನಾಟ
ಜಂಗಮವೆ ಜಗವೆಲ್ಲ
ಅಲೆಯಾರವದಲ್ಲಿ ಚೇತನದ ಚೆಲ್ಲಾಟ ರವಿತೇಜ //216//

ಕಲಿ ಕಲಿಸು ಪ್ರಕೃತಿಯೆ ಗುರುವು
ಕಾಡುಗೂಡಗೊಡವೆಯೇಕೆ ಅರಿವಿಗೆ
ಮನದಗೂಡು ಬೆಳೆಸು ರವಿತೇಜ //217//

ಐಶ್ವರ್ಯವು ಆಧಿಭೌತಿಕ ಸಂಪತ್ತೆ
ಉಸಿರಡಗಲು ಬರುವುವೇನ್ ಜೊತೆಗೆ
ಮನಸ್ವಾಸ್ಥ್ಯಕಿಂತ ಮಿಗಿಲುಂಟೆ ಐಶ್ವರ್ಯವು ರವಿತೇಜ //218//

ಬಾಣದಲುಗಿಗೆ ವಿಷವ ಸವರುವಂತೆ
ಮಾತಿಗೆ ಸಕ್ಕರೆಯ ಸವರುವವರ
ಅರಿತು ದೂರವಿರು ರವಿತೇಜ //219//

ಕೋರ್ಟು ಕಟಕಟೆ ವಾದಿ ಪ್ರತಿವಾದಿ
ಸಾಕ್ಷಿ ವಕೀಲ ನ್ಯಾಯಾಧಿಪತಿ
ಪೋಲಿಸರೆಲ್ಲ ನಿನ್ನೆದೆಯಲಿಹರು ರವಿತೇಜ //220//

ಹುಲಿಯಂತಾಕ್ರಮಣ ನರಿಯಂತೆ ಮೋಸದಾಟ
ಗೋಸುಂಬೆಯಂತೆ ಬಣ್ಣ ಬದಲು ಸಮಯಕೆ
ಸ್ವಾರ್ಥಕ್ಕೆ ಗೋಪ್ಯದಾಟವು ರವಿತೇಜ //221//

ಉಪ್ಪು ಸಕ್ಕರೆ ಮೆಣಸು ಹುಣಸೆ
ರುಚಿಗೆ ತಕ್ಕಂತೆ ಆರೋಗ್ಯಕನುವಾಗಿ
ಹೊಟ್ಟೆ ನಾಲಿಗೆಗೆ ಕಟ್ಟಿರಲಿ ರವಿತೇಜ //222//

ಸುಖದಲಿ ಸಂಯಮ ಕಷ್ಟದಲಿ ಧೃತಿ
ಬೀಗದಿರು ಬಾಗದಿರು ಏಳುಬೀಳಲಿ
ಅನುಭವ ಚಿಂತನೆಯು ಓಜನು ರವಿತೇಜ //223//

ಅನೃತಕೆ ನೂರ್ಕಾಲ ಅಭಿಷೇಕ
ಮಾಡಿದರೂ ಸತ್ಯತಾನಾಗದು
ಸತ್ಯಾಸತ್ಯ ವಿವೇಕ ಸಂಪದವು ರವಿತೇಜ //224//

ನಡೆವದಾರಿಯಲಿ ಕಲ್ಲುಮುಳ್ಳಿವೆಯೆಂದು
ಕೂರಲಾದೀತೆ ಮನೆಯಲಿ
ಸರಿಪಡಿಸಿ ಸಾಗುವುದೆ ಸಮ ರವಿತೇಜ //225//

ಮೌನ ಮಾತಾಗಲಿ
ಮಾತು ಮೌನವಾಗಲಿ
ಮೌನಮಾತಿನಲಿ ಬೆಳಕಿರಲಿ ರವಿತೇಜ //226//

ಉಣಿಸದಿರು ಮನಕೆ ತಾಪವನು
ತಣಿಸು ಮನವ ಸವಿತಿರುಳ ಉಣಿಸಿ
ಭವಸುಖಕೆ ಅರಿವೆ ತವರು ರವಿತೇಜ //227//

ತಿಳಿನುಡಿಯೆ ನಿತ್ಯ ಸಾಹಿತ್ಯವು
ತಿಳಿಮನವೆ ಕನ್ನಡಿಯಹುದು
ಮನಮಂಥನದಿ ನವನೀತವು ರವಿತೇಜ //228//

ತಂತಾನೆ ಅರಳದು ವ್ಯಕ್ತಿತ್ವವೊಂದು
ಪಂಚಭೂತಗಳ ಪುಷ್ಟಿಯಲಿ
ಕಾಲಧರ್ಮದ ಚೌಕದಲಿ ಒಡಮೂಡುವುದು ರವಿತೇಜ //229//

ನೇಮದಿ ನಡೆಸೆ ಭವದ ಹುಟ್ಟುಗೋಲು
ಸಮತೆಯನರಿತರೆ ದೇವನೊಲವು
ಗಮ್ಯಕ್ಕೆ ಕುಮ್ಮಕ್ಕು ದೇಹ ಸಾಧನವು ರವಿತೇಜ //230//

ಮನದಿಂಮನಕೆ ಅರಿವಾಗುವುದು
ಅಸಲಿ ನಕಲಿಯ ತೆರೆ
ತೆರೆ ಮನದ ತೆರೆ ರವಿತೇಜ //231//

ಚತುರ ಸಂದೇಶವಾಹಕನ ಮನದಿಂಗಿತವ
ಅಳೆಯಲು ಸಲ್ಲ ನುಡಿ ನಡೆಯಿಂ
ಕಣ್ಣವೆಯ ಬಳುಕಿನಿಂ ಉಸಿರ ಪಿಸುವಿನಿಂ ರವಿತೇಜ //232//

ಸೀಮೋಲ್ಲಂಘನಕೆ ಹನುಮನೊರ್ವನೆ ಸಾಟಿ
ಎಲ್ಲರಿಂದೆಲ್ಲವಾಗದೆಂದರಿತು ಲಂಕೆಗೆ
ಕಟ್ಟಿದರು ರಾಮಸೇತು ರವಿತೇಜ //233//

ತಿಳಿದೆನೆಂಬುದು ತಿಳಿವಲ್ಲ ಕಾಣೋ
ತಿಳಿವೆ ನೀನಾಗಲು ನಾನೆಂಬ ಭಾವ
ತಿಳಿಯಾಗಿ ಜಗದಲಿ ಲೀನವಾಗುವುದು ರವಿತೇಜ //234//

ಮನದ ಬಯಕೆಗಳು ಬಾವಲಿಯಂತೆ
ತಲೆಕೆಳಗಾಗಿ ನೇತಾಡಿ ಹಿಕ್ಕೆಪಿಕ್ಕೆಯನು
ಹಾಕುತಿರೆ ಸುವಾಸನೆಯಲ್ಲವದು ರವಿತೇಜ //235//

ನಾಟಕದ ಪಾತ್ರಗಳು ನೈಜವಾಗುವುದೆ
ರಂಗದಿಂದಿಳಿದೆಡೆ ಬಣ್ಣ ಕರಗುವುದು
ಸತ್ಯಾಸತ್ಯದ ಅರಿವು ವಿವೇಕದಲಿ ರವಿತೇಜ //236//

ಒಳಗಣ ನುಡಿಗೆ ಕಿವಿಯಿಡಲು ಬೇಕು
ನಿಜಾನಿಜವ ನೇಮದಲಿ ತೋರುವುದು
ನಿನಗೆ ನೀನೇ ನ್ಯಾಯದಧಿಕಾರಿ ರವಿತೇಜ //237//

ರವಿಯು ಅಂಬುಧಿಯಲಿ ಮುಳುಗುವನೆಂದೆಣಿಸುವರು
ಚಂದ್ರ ಹಿಗ್ಗಿಕುಗ್ಗುವನೆಂದು ಭ್ರಮಿಸುವರು
ಕಣ್ಣು ಕಾಣುವುದಷ್ಟೆ ಸತ್ಯವಲ್ಲವು ರವಿತೇಜ //238//

ತುಟಿಯಾಚೆ ನುಡಿದರೆ ಸಾಲದು
ಮನಮಿಡಿದು ಮಾರ್ದನಿಸಬೇಕು
ಸಂಸ್ಕೃತಿಯ ಸಹಜಕೃತಿಯು ಪ್ರಕೃತಿ ರವಿತೇಜ //239//

ವೈವಿಧ್ಯದಲೇಕತೆಯು ಚಂದ
ಏಕತೆಯಲಿ ಮೂಡದು ವೈವಿಧ್ಯ
ಅವುಗಳವುಗಳಿಗೆ ಚಂದ ರವಿತೇಜ //240//

ಕಣ್ಣು ಕಿವಿ ತೆರೆದಿಡಲು ಜಗವೊಂದು ಶಾಲೆ
ಅಕ್ಕರದಿಂ ಅಕ್ಷರವ ತೋರುವುದು ಮುದದಿ
ಮನವಿಟ್ಟೆಡೆ ಶಿಕ್ಷಾದೀಕ್ಷೆ ಯಶ ರವಿತೇಜ //241//

ಕಾರ್ಯ ಕಾರಣವಿರದೆ ನಡೆಯದೀ ಜಗವು
ಸಫಲ ವಿಫಲ ನಿಷ್ಫಲಕೆ ಅರಸು ತರ್ಕವನು
ವಿವೇಚನೆಯಲಿಹುದು ಪರಿಹಾರವು ರವಿತೇಜ //242//

ಒಂದರಂತೊಂದಿರದು ಪ್ರತಿ ಎಲೆಎಲೆಯು
ರವಿ ತಲುಪುವನದನು ದ್ಯುತಿಸಂಶ್ಲೇಷಣೆಗೆ
ಸಮಭಾವ ಸಂಸ್ಕೃತಿಯು ಪ್ರಕೃತಿ ರವಿತೇಜ //243//

ಕಳೆವುದಷ್ಟೆ ಇಲ್ಲ ಕೂಡುವುದಷ್ಟೆ ಇಲ್ಲ
ಕಳೆದು ಕೂಡುವುದು ಕೂಡಿ ಕಳೆಯುವುದು
ಪರ್ಯಾಪ್ತದಿ ಶೂನ್ಯವೇ ಬೆರಗು ಜಗದಿ ರವಿತೇಜ //244//

ಹೆಜ್ಜೆಹೆಜ್ಜೆಗೆ ಆತ್ಮವಿಮರ್ಶೆಯ ನಿಕಷವಿರೆ
ಜೀವನದಿ ನೀನಾಗುವೆ ಸುವಿಹಾರಿ
ನೆಲದೊಳಗಣ ಬೇರು ವೃಕ್ಷಕೆ ಅಡಿಪಾಯ ರವಿತೇಜ //245//

ಬೆವರಸ್ನಾನ ಉರುಟುಕಲ್ಲ ನಿದ್ರಾಸುಖ
ಹಾಲುತುಪ್ಪದಿ ಮಿಂದು ಪನ್ನೀರ ಪೂಸಿ
ರಾಶಿಹೂ ಪಲ್ಲಂಗದಲಿ ದೊರಕೀತೆ ರವಿತೇಜ //246//

ಕಾಲಂಗೆ ಕಟ್ಟೆ ಕಟ್ಟಲಹುದೆ
ತೋಡಿ ಕಾಲುವೆಯ ಫಸಲು ಬೆಳೆಯಲಹುದೆ
ಸಾಜಗತಿಗನುವು ಫಲ ಚೆಲುವು ರವಿತೇಜ //247//

ಜಗದಾಸಂಪನ್ನರಾದರು ನಗ್ಗೆಸ್ತು ಬೆದರು
ಜಾರಿ ಬಡಪಡ ಶಾಲುಗಳಂಡಿಸ ಬೆರು
ಜೀರುಬಲು ಅಕ್ಕರೆಯು ತಿಳಿ ನೆನೆಗಾಡ ಬೆರು ರವಿತೇಜ //248//

ಪ್ರೀತಿಯ ಬೆರು ಪ್ರಾಂಜ್ಞವ ಸ್ನೇಹಾಂದ್ರರ
ಅವಿನಾಶ್ಯದ ಹುತಾತ್ಮಾಜ ಹರಿ
ಹರಿ ಒಲಿ ವಿದ ಅರ ಹಾದು ಪುಷ್ಪ ರವಿತೇಜ //249//

ಅವಾಡಾಗುಣದು ಒಂದಿತ್ತು
ಸಿಕ್ಕಿದರು ತರದು ಹಾಗಿಲು
ಹಾಗಾಗಿ ಗಳಿಕೆಯಾಗುದು ರವಿತೇಜ //250//

ಸಿಹಿ ತೊಡುವರ ಸಿಹಿಯದು
ನಂಬಬ್ಬೆ ಅವಳಿಗ್ಯ
ಅವರು ಸಕ್ಕರ್ ಹಾಗು ಒಡಲು ರವಿತೇಜ //251//

ತನು-ಮನ ಸೇರೆ ಚೈತನ್ಯವನನ್ಯ
ತೋಳ್ಬಲ ಜೀವನಾನುಭವದೊಡಗೂಡೆ
ಕಾಳು ರಸಗಟ್ಟುವುದನನ್ಯ ರವಿತೇಜ //252//

ಬೇಕಾದಾಗ ಬೇಕಾದ್ದು ಬಳಸುವರು
ನಂತರ ಬಿಸುಡುವರು ನಿರುಪಯುಕ್ತವೆಂದು
ಬೇಕು ಬೇಡಗಳು ಕಾಲದ ಕರಾಮತ್ತು ರವಿತೇಜ //253//

ತೆರೆ ಮನದ ಕಿಟಕಿ ಬಾಗಿಲು
ಗವಾಕ್ಷಿಗಳ ಬರಲಿ ಗಾಳಿ ಬೆಳಕು
ಜೀವನವಾಗಲಿ ತಿಳಿವಿನ ತೇರು ರವಿತೇಜ //254//

ಅನುಭವದಿ ಬೆಳೆದ ಹಿರಿತನವು
ಅನುಭವಕೆ ತೆರೆದ ಕಿರಿತನವು
ತವಂಗದಾಟವಲ್ಲ ನಿಜಹೂವು ರವಿತೇಜ //255//

ತವಂಗ = ಎತ್ತರದ ವೇದಿಕೆ

ಬೆಳೆಯದು ದೇಹ ವಂಶವಾಹಿಯ ಮೀರಿ
ಅಳ್ತನವಾಗದು ಆಲೋಚನೆಯ ತೀರಿ
ತೀರ ಮೀರಿದರೆ ಕಿರಿಕಿರಿ ರವಿತೇಜ //256//

ಗೆಲುವು ಸೋಲುಗಳು ನಾಣ್ಯದೆರಡು ಮುಖ
ಚಿಮ್ಮಿದೆಡೆ ತಿರುಗುತ್ತ ಮೇಲುಕೆಳಗಾವುದು
ಬೇವುಬೆಲ್ಲದಲಿ ಸಮಚಿತ್ತವಿರಲಿ ರವಿತೇಜ //257//

ಸ್ವರ್ಗ ನರಕಗಳೆಂದು ಕೊರಗಿ ಸೊರಗದಿರು
ಸೃಷ್ಟಿಗನುವಾಗಿ ತೊಡಗು ಸಹಜಕ್ರಿಯೆಯಲಿ
ನಗೆಮುಗುಳನು ನೋವಿನೊಳಗಿಟ್ಟಿಹನವ ರವಿತೇಜ //258//

ಬಿದ್ದೆನೆಂದು ಭ್ರಮಿಸದಿರು ಗೆದ್ದೆನೆಂದೆಣಿಸದಿರು
ಚೈತನ್ಯವಿರೆ ಬೀಳು ಏಳಾಗುವುದು
ಏಳುಮಲೆಯೊಡೆನಲಿ ನಂಬಿಕೆಯೆ ಬಾಳು ರವಿತೇಜ //259//

ಒಳಿತು ಕೆಡಕುಗಳುಂಟು ಬಯಕೆ ಕಾಮಗಳಲಿ
ಸರಿ ತಪ್ಪುಗಳ ಜಿಜ್ಞಾಸೆಯಲಿ ಬೇಕು ಬೇಡಗಳಿರಲಿ
ಆತ್ಮವಿಶ್ವಾಸವೆಂದರೆ ಅಹಮಿಕೆಯಲ್ಲ ರವಿತೇಜ //260//

ಕಾಮನಬಿಲ್ಲಿಗಿಹ ಸಪ್ತವರ್ಣಗಳು
ಅಡಗಿಹವು ರವಿರಶ್ಮಿಯೊಳಗೆ
ಆಕರ್ಷಣೆಯಳಿದರಿವನರಸು ರವಿತೇಜ //261//

ಅಲ್ಪವೆಂದೆಣಿಸದಿರು ಕಾರಣವ
ಅಗಸನ ನುಡಿ ಜಾನಕಿಗೆ, ಮೂರುಪಾದದ
ಭೂದಾನ ಮುಳುವಾಯ್ತು ಬಲಿಗೆ ರವಿತೇಜ //262//

ಕುರುಪತಿಯ ಕ್ರೌರ್ಯದಿ ಕರ್ಣನಾದ
ಅಂಗಪತಿ, ಸಂಗದ ಸವಿಗಲ್ಲ, ತಿಳಿದೊ ತಿಳಿಯದೊ
ಕೇಡಿಗರ ಸಂಗ ಕೆಡಕು ರವಿತೇಜ //263//

ಬೇಡವಾಗಲೇಕೆ ಶಾಂತಿಃ ಶಾಂತಿಃ ಶಾಂತಿಃ ಎನ್ನುವುದು
ಸ್ವಸ್ಥ ಮನ ಸ್ವಸ್ಥ ದೇಹದಿಂ ಸ್ವಸ್ಥ ಸಮಾಜ ಬದುಕು
ಸ್ವಸ್ಥತೆಗೆ ಶಾಂತಿಯೇ ಅಡಿಪಾಯ ರವಿತೇಜ //264//

ಅನ್ಯಾಯ ಗೆದ್ದಿತೆನಿಸುವುದು ಕೆಲಕ್ಷಣವು
ಮರಳುಗಾಡಿನ ಮರೀಚಿಕೆಯಂತೆ
ನಿಜಹೊಳ್ಳಿದ ಸತ್ಯವೇ ನಿತ್ಯ ರವಿತೇಜ //265//

ರಂಗನ್ನು ತೋರ್ಪ ಮಾತಿನ ಮಂಟಪವು
ಕಾರ್ಯಯೋಜನೆಯ ಜಾರಿಗನುವಹುದೆ
ನುಡಿ ನಡೆಯಾಗಿ ನಗೆಯರಳಲ್ ಹದ ರವಿತೇಜ //266//

ಪಶ್ಚಿಮದ ಕಡಲಲ್ಲಿ ಮುಳುಗುವ ಭಾನು
ಪೂರ್ವದಲಿ ಏಳುವನೆಂಬ ನಂಬಿಕೆಯೆ
ಹುಟ್ಟಿಸುವುದು ಬದುಕಿನಲಿ ಭರವಸೆಯ ರವಿತೇಜ //267//

ಸತ್ಯಾಸತ್ಯತೆಯಗ್ನಿಲೆದ್ದವಳ ಬಗೆ
ಅಪನುಡಿಯಾಡಿದವನಳೆಯದವನ
ಅಶ್ವಮೇಧ ಅವಳ ಪ್ರತಿಮೆಯೊಡನಾಯ್ತು ರವಿತೇಜ //268//

ಕಾಷ್ಠದಲಿ ಉರುವಲು, ಗೂಟ, ಕಂಬ
ಕಾಣುವರು ಅನ್ಯರು, ಸುಶಿಲ್ಪವ ಕಂಡಲ್ಲಿ
ಬಿಡಿಸುವರು ಅನನ್ಯರು ರವಿತೇಜ //269//

ತಪ್ಪುಒಪ್ಪುಗಳು ನಡೆನುಡಿಯಲಿ ಸಹಜವು
ಒಳ್ನುಡಿಯನಾಲಿಸಿ ಕೃತಿಗಿಳಿಸೆ
ಹೊರಗೆ ಶಾಂತಿನರಸುವುದು ಬೇಡ ರವಿತೇಜ //270//

ಸುಲಭ ಜೀವನ ಬಯಸಿರೆ ಗರಳನರಗಿಸುವುದೆಂತು
ಕಲ್ಲುಮುಳ್ಳಿನ ಹಾದಿ ತುಳಿಯೆ ಪಾದ ಗಡುಸಾದೀತು
ಚಂದ ಚೆಲುವು ತೆರೆದೀತು ರವಿತೇಜ //271//

ಜೀವಜಂತುಗಳು ಭಾವಪ್ರೇಮಗಳು ಮೊಳೆತವೆಂತು
ಅರಸಿ ಸೋತಿವೆ ತತ್ತ್ವ ವಿಚಾರ ವಿಜ್ಞಾನ
ಮರೆತು ಅಮ್ಮನೆಂಬ ಸಖಿಯ ರವಿತೇಜ //272//

ಮೊದಲು ನಿನ್ನನೆ ನೀ ನಂಬು
ಜಿಜ್ಞಾಸೆ ಕಾಯಕವಿನ್ಯಾಸದ ವಿವೇಕವ
ಜಂಬದ ಹುಂಬಹುಡಿಯನ್ನಲ್ಲ ರವಿತೇಜ //273//

ಯಾರಿಗೆ ನಿನ್ನಿಂದೇನು ಬೇಕೆಂದನರಿ
ವಿವೇಕದ ನಿಕಷಕ್ಕೆ ಒಡ್ಡು ನಿನ್ನ ನೆತ್ತಿಯ
ಕಾಯ್ವ ಶಿವ ನೀನೆ ಬೇರಲ್ಲ ರವಿತೇಜ //274//

ಮೆದುಳಲಿ ಹೃದಯಮಿಡಿದು
ಹೃದಯದಲಿ ಮೆದುಳರಳಿ
ಭಾವ ಚಿಂತನೆಯಲಿ ಸಮದೃಷ್ಟಿಯೇ ಬೆಳಕು ರವಿತೇಜ //275//

ಬದುಕಿಗಿರಲಿ ತಾರ್ಕಿಕ ಕಟ್ಟುಪಾಡು
ಒಡ್ಡುಒಡೆದ ಕೆರೆಯಲಿ ನೀರುನಿಲುವುದೇನು
ಎದೆಯಾಡಲಿ ತರ್ಕವನುಸಿರಂತೆ ರವಿತೇಜ //276//

ಅಳೆಯದಿರು ಜನರ ವೇಷಭೂಷಣದಿಂದ
ಗೌರವವು ಬೆಳೆಯದು ಗಳಹಿನಿಂದ
ಪಾರದರ್ಶಕ ವ್ಯಕ್ತಿತ್ವವೇ ಸೌರಭವು ರವಿತೇಜ //277//

ದುಡಿಯಬೇಕು ಬೆವರು ಬಸಿಯುವವರೆಗೆ
ಶ್ರಮಕಿಹುದು ತಕ್ಕ ಪ್ರತಿಫಲವು
ಶ್ರದ್ಧೆಯೇ ನೆಮ್ಮದಿಯ ತೋರುಗಂಬ ರವಿತೇಜ //278//

ಬಾಹುಬಲಿ ಗೆದ್ದನೆ ಯುದ್ಧದಲಿ
ಮರಳಿಸೆಲ್ಲವ ಗೆದ್ದನೆ ಭರತನ
ಋಣಕಳೆದು ಬಯಲಾಗಿ ತನ್ನ ತಾ ಗೆದ್ದ ರವಿತೇಜ //279//

ತಿಳಿದು ತಿಳಿಯ ತಿಳಿಸು ತಿಳಿಯಾಗಿ
ಕುದಿತವಳಿದು ಕಡೆಗೋಲಾಟದಿಂದೆದ್ದ
ತಿಳಿಮನವು ಬೆಣ್ಣೆಯಂತೆ ರವಿತೇಜ //280//

ಸ್ವಯಂವರದಿ ಮೀನಕಣ್ಣು ಕಂಡ ಪಾರ್ಥನಂತೆ
ಲಂಕೆಯ ಸುಟ್ಟು ಬಾಲವ ಕಡಲಲದ್ದಿದ
ಮಾರುತಿಯಂತೆ ಧೃಡಶ್ರಮಕೇ ಗೆಲುವು ರವಿತೇಜ //281//

ನಾನು ಬ್ರಹ್ಮವಾಗದೆ ಅಹಂ ಆದಾಗ
ಸರ್ವಜೀವರ ಉಸಿರೊಂದೆ ಎಂಬರಿವಿರದಿರೆ
ಸಾಕ್ಷಾತ್ಕಾರ ಬೆಡಗುನುಡಿ ರವಿತೇಜ //282//

ನೀನಾರು ನಾನಾರೆಂದೆಣಿಸದು ಪ್ರಕೃತಿ
ಅದಕಿಂತ ನಾವ್ ಮಿಗಿಲೆನ್ನುವುದು ವಿಕೃತಿ
ಸಮದೃಷ್ಟಿಯೆ ಸೃಷ್ಟಿಯ ಸಂಪದವು ರವಿತೇಜ //283//

ಭಾವದೇರಿಳಿತಗಳು ಬಯಕೆಗಳ ಬೇಟ
ಮೈಯಬಾಗಿಸಿ ಹೂಡು ನೇಗಿಲ ಹೂಟ
ಸಮಚಿತ್ತವರಮನೆಯು ರವಿತೇಜ //284//

ಹೆಬ್ಬೆರಳು ಬೇಡಿದ ಗುರು ಚಿಕ್ಕವನಾದ
ಕಡಿದುಕೊಟ್ಟ ಶಿಷ್ಯ ದೊಡ್ಡವನಾದ
ಮಾನವತೆ ಮಾತಿಗಿಂ ಮಿಗಿಲು ರವಿತೇಜ //285//

ಭಾವಿಸದಿರು ನೀನಣುವೆಂದು
ಕೂಡೊಡೆದು ಹೊಡೆದು ಕೂಡುವ ಪರಮಾಣು
ಕೊಡುವುದಪರಿಮಿತ ಶಕ್ತಿ ರವಿತೇಜ //286//

ಹಾಲುನೀರಲಿ ಹಂಸದಂತೆ ಹಕ್ಕಬುಕ್ಕರನಾಯ್ದ
ವಿಜಯನಗರ ವಿದ್ಯಾರಣ್ಯರು
ಅನುಪಮ ಗುಣಗ್ರಾಹಿಯಲ್ಲವೆ ರವಿತೇಜ //287//

ಅತ್ತಿತ್ತ ವಾಲದಿರು ತಪ್ಪೀತು ಸಮತೋಲ
ಆರುಮೂರಕ್ಕೇರಿಳಿಯದೆ ಹಿಡಿ
ಸುವರ್ಣಮಧ್ಯಮದ ಸರಿಹಾದಿ ರವಿತೇಜ //288//

ಏನೂ ಬಯಸದೆ ನಡೆವುದು ಜಗದ ಕ್ರಿಯೆಯು
ಕರ್ತವ್ಯಕ್ಕೆ ಬಯಕೆಯ ನೇಣೇಕೆ
ಬಯಸದ್ದು ಬಾರದಿರೆ ದುಃಖದುಮ್ಮಾನ ರವಿತೇಜ //289//

ಯಾರನ್ನೂ ಕೇಳದಿರು
ನಿನಗೆ ನೀನೆ ಬೆಳಕಾಗು
ನಿರಂಕುಶಮತಿಯಾಗು ರವಿತೇಜ //290//

ತಿರುಳ ಕಾಣಿಸದು ತೋರ್ಕೆ
ಮರಳು ಮಾತಲ್ಲ ಮತಿ
ತರತಮದ ತೀಕ್ಷ್ಣ ವಿವೇಕವೆ ಗುರುವು ರವಿತೇಜ //291//

ಅನುಕರಿಸು ಅರುಣಿಮಾಳ ಜೀವನೋತ್ಸಾಹ
ಕೃತಕಕಾಲಲಿ ಗೌರಿಶಂಕರವೇರಿದ ಛಲ
ಹುಟ್ಟಿದಳು ಪರ್ವತದಿ ಮತ್ತೊಮ್ಮೆ ರವಿತೇಜ //292//

*Born again on the Mountains ; ಅರುಣಿಮಾ ಸಿನ್ಹಾ
ಅವರು ರಚಿಸಿರುವ ನೋವನ್ನು ಗೆದ್ದ ಕಥೆ

ಮೊಟ್ಟೆ ಮರಿಯಾಗಿ ಪೊರೆಹುಳವಾಗಿ
ಬದಲಾದರೂ ರೂಪ ಆಕಾರದಲಿ
ಮೂಲದಲದು ರೇಶಿಮೆಯ ಹುಳುವೆ ರವಿತೇಜ //293//

ಚಿತ್ತಕ್ಕೆ ಬೇಕು ಶ್ರಮದ ಬಿತ್ತವು
ಸತ್ವಗಳಿಕೆಗೆ ತ್ಯಾಗ ತತ್ತ್ವವು
ಅಹಂ ಅರಿತರೆ ಸೋಹಂ ರವಿತೇಜ //294//

ಜರ್ಬಿನ ಚಕ್ರಾಧೀಶರು ಹೆಸರಿಲ್ಲದೆ
ಹುಡಿಯಾದರೂ ವಿರಾಗಿ ವಾಲ್ಮೀಕಿ
ವ್ಯಾಸರಿನ್ನೂ ಚಿರಂಜೀವಿಗಳು ರವಿತೇಜ //295//

ಓಕುಳಿ ರಿಂಗಣದ ರಂಗು ಹೂವಾಗಲಿ
ಮೇಲಾಟದ ರಿಂಖಣ ರಣಾಂಗಣವಾಗದಿರಲಿ
ಮಿಂದು ಬಣ್ಣದಲೆದೆ ಮಿದುವಾಗಲಿ ರವಿತೇಜ //296//

ರಿಂಖಣ= ಸುತ್ತುಬಳಸಿನ ಹಾದಿ, ತಪ್ಪಿದ ಹಾದಿ

ರಾವಣ ವಿಭೀಷಣರ ಬದುಕು
ಕಾಲದೇಶದೊಳು ಏರಿಳಿಯದ ಸರಕು
ಗುರುತಿಸಿ ಬಾಳುವುದು ಚಮಕು ರವಿತೇಜ //297//

ಪ್ರಶ್ನಿಸು ಹುಡುಕು ಎಂದ ಪ್ರಾಜ್ಞ
ನಿನ್ನುದ್ಧಾರಕೆ ನೀನೆ ಗುರುವೆಂದಿತು ಗೀತೆ
ಸವಾಲು ಜವಾಬು ನಿನ್ನೊಳಗೆ ರವಿತೇಜ //298//

ಮಸುಕು ಕತ್ತಲೆಯಲಿ ಹಗ್ಗವಂ
ಹಾವೆಂದೆಣಿಸಿ ಅಂಜದೆ ಸುಜ್ಞಾನದಿಂ
ಶೋಧಿಸೆ ಸತ್ಯಶೋಭಿಪುದು ರವಿತೇಜ //299//

ಬಾನು ಕಾನು ಇರಲು ಇಳೆ ಮಳೆ ಬೆಳೆ
ಇಂತು ಮೇಲುಕೀಳಿಲ್ಲದ ಬಾಳು
ಸಹಜವೀ ಸಾಧನವೆ ಬೆಳಕು ರವಿತೇಜ //300//

ಕಾಕನೇನ್ ಕೀಳಲ್ಲ ಪಿಕನೇನ್ ಮೇಲಲ್ಲ
ಅರಿತು ನಡೆ ಯಾರು ಏನೆಂದು
ಅವಧರಿಸು ಅವರನವರಂತೆ ರವಿತೇಜ //301//

ತೀರದಿ ತಿರುಗೆ ತಿಳಿವು ತೀರದು
ತಿಳಿದವನೆಂದು ತಿಳಿದರೆ ತಿಳಿ ಬಗ್ಗಡವು
ತಿಳಿ ತಳಕಿಳಿದು ತಿರ ತಿಳಿವ ರವಿತೇಜ //302//

ತಿರ= ಅಂತ್ಯವಿಲ್ಲದ, ಶಾಶ್ವತ

ಸಹಜವಿರೆ ಸಂಗಸುಖವು
ಸರಾಗ ನಡೆನುಡಿಯ ಸಂಗಮವು
ಮುಗ್ಗರಿಪುದು ಮೂರ್ಕಾಲೋಟವು ರವಿತೇಜ //303//

ಮನವಿದ್ದಲ್ಲಿ ಮಹದೇವ ಅದಕೆ
ಟಾಂ ಅರುಣಿಮಾಗೆ ಸವಾಲು
ಆಗಲಿಲ್ಲ ಗೌರಿಶಂಕರ ರವಿತೇಜ //304//

ಟಾಂ= ಟಾಂ ವೈಟ್ಟರ್; ಎವರೆಸ್ಟ್ ಹತ್ತಿದ ಮೊದಲ ವಿಕಲ ಚೇತನ, ಅಪಘಾತದ ನಂತರ ಕಾಲನ್ನು ಕತ್ತರಿಸಲಾಗಿತ್ತು.

ಅರುಣಿಮಾ= ಎವರೆಸ್ಟ್ ಹತ್ತಿದ ಮೊದಲ ಮಹಿಳಾ ವಿಕಲ ಚೇತನ. ಅಪಘಾತದ ನಂತರ ಕಾಲನ್ನು ಕತ್ತರಿಸಲಾಗಿತ್ತು.

ಕಲಿತವ ನುಡಿಯೆ ಬೆಳವಣಿಗೆ
ಡಂಭವ ಮೆರೆಸೆ ಉರವಣಿಗೆ
ಗುಂಬ ಭದ್ರವಿರೆ ಮೆರವಣಿಗೆ ರವಿತೇಜ //305//

ಉರವಣಿಗೆ=ಅನಾಹುತ, ಗುಂಬ= ಚಕ್ರದ ಮಧ್ಯಭಾಗ

ಹುಟ್ಟು ಚಟ್ಟನ ನಡುವೆ ಮುಟ್ಟು
ಚೇತನರೂಪ ಮುಟ್ಟದಿರೆಂಬ ಅಂಧಕೆ
ಬೀಳದಿರೆ ಬದುಕು ಚಂದ ರವಿತೇಜ //306//

ಚಟ್ಟ= ಅಂತ್ಯ

ಆವುದು ಮೊದಲೆಂದು ವಿಕಾಸವಾದ ಸಾರಲು
ಜೀವಾಂತರಿಕ್ಷದರಿವ ಜಿಜ್ಞಾಸೆ
ನಿರಂತರ ಅನ್ವೇಷಣೆಯೆ ಸಾರ ರವಿತೇಜ //307//

ದಿಟ ಸೆಟೆಗೆ ತಲೆಗೊಡದೆ
ಅಂತರಾತ್ಮನ ನುಡಿಗೆ ನಡೆ
ದಿಟ್ಟದಿಂದಿಟ ಸೆಟೆದು ನಿಲುವುದು ರವಿತೇಜ //308//

ನೀನೆಂದರೆ ನೀನಲ್ಲ ತಿಳಿ
ಎಲ್ಲರಲಿ ನೀನಾಗಿ
ನೀನು ಎಲ್ಲವಾಗಿ ಬೆಳಿ ರವಿತೇಜ //309//

ಬೇಡಿದುದೆಲ್ಲವೂ ಮಡಿಲಲಿರೆ
ಬೆಳವಣಿಗೆಯಾಗುವುದು ಕೊರೆ
ಶಿವನ ಕಾಣಲು ಗೌರಿಶಂಕರದ ಏರು ರವಿತೇಜ //310//

ಕೊರೆ=ಕಡಿಮೆ

ಕೊಡಲು ಕೊಟ್ಟಿಹನು
ಪಡೆ ಹಸಾದವಿತ್ತಿಹನು
ಕೊಡು ಪಡೆವ ತ್ರಾಸು ಸಮವಿರಲಿ ರವಿತೇಜ //311//

ತ್ರಾಸು=ತಕ್ಕಡಿ

ಬಾಗದಿರು ಅನೃತಕೆ ಸೆಟೆದು ನಿಲ್ಲು
ಯೋಗ್ಯಾಯೋಗ್ಯದ ವಿವೇಚನೆಯಿರಲಿ
ಅನುಕಂಪ ಋತ ರುತವಾಗದಿರಲಿ ರವಿತೇಜ //312//

ಋತ=ಸತ್ಯ, ರುತ=ಪ್ರಾಣಿಯ ಮೊರೆತ, ತುಂಡುತುಂಡು ಮಾಡು

ಹರಿವು ಸತತ ಶೋಧನೆಯು
ಹರಿ ಮರೆಯೆ ತೊರೆ ತೊರೆಯು
ಮನದೊಳ್ಪು ಕಡೆದ ನವನೀತವು ರವಿತೇಜ //313//

ಬಂದು ಹೋದವರೆಲ್ಲ ರೂಪವಿತ್ತಿರಬಹುದು
ಅಪರೂಪವನಿತ್ತವರ ಗುರುತಿಸದಿರೆ ಜೀವನದಿ
ಸತ್ಕೃತಿ ಸಂಪದವ ಸುಡುಗಾಡಿಗೆಸೆದಂತೆ ರವಿತೇಜ //314//

ದುರ್ಯೋಧನನ ಆಡಳಿತದಿ
ಮಂತ್ರಿ ದುಶ್ಯಾಸನ ಕರ್ಣ ಮೌನಿ ಭೀಷ್ಮರಿಂ
ಕುರುಕುಲದ ವಿನಾಶಕಾಯ್ತು ಶಾಸನವು ರವಿತೇಜ //315//

ಸ್ಪಂದನೆ ಹಸಿವು ನೀರಡಿಕೆಗೆ ಸಹಜ
ಮದ್ದು ಚೇತರಿಕೆಗೆ ಸಹಜ
ಹದ್ದುಮೀರಲು ನಡೆ ಮದ್ದು ಚಿಂತನೆಯು ರವಿತೇಜ //316//

ಹಿರಿಬದುಕಿಗಳತೆಗೋಲೆಂದು
ಅಂಕ ಸುಂಕದ ತಲೆಪಟ್ಟಿ ಕಟ್ಟದಿರು
ಪರಸ್ಪರ ಅರಿವು ಹೆಚ್ಚಿಪುದು ಹಿರಿತನ ರವಿತೇಜ //317//

ನಿಸರ್ಗದ ನಡೆ ನಮ್ಮಾಸೆಯಂತಲ್ಲ
ಭೇದವೆಣಿಸದೆ ತರತಮದ ಕಹಿಸರಿಸಿ
ಮಿಡಿವುದದು ಉಸಿರಿನಂತೆ ರವಿತೇಜ //318//

ಯೋಗಾಯೋಗವೆಂದಿರಲಾಪುದೆ ಸುಮ್ಮ
ಯತ್ನದಿ ಸಾಧನವ ಜೋಡಿಪುದು ಗಮ್ಯ
ಶ್ವಾಸದಿ ಆತ್ಮ ಕೂಡಿಪುದು ಯೋಗವಮ್ಮ ರವಿತೇಜ //319//

ಕಸುವು ಕನಸಿಗೆ ಕಡುಗೆಯ್ಮೆ
ಬಯಕೆಭವನಕೆ ಬೆವರೇ ಮೇಲ್ಮೆ
ಬುಡಭದ್ರವಿರೆ ಬಾನಾಟವೊಲ್ಮೆ ರವಿತೇಜ //320//

ಸುಳಿವ ಭಾವ ಚಿಂತನೆಗಳ ಸೋಸಿ
ತಿಳಿಯನೊಳಗಿಳಿಸಿ ಸೌರಭವ ಸೂಸಿ
ಸ್ವಹಿತವ ಜಗಹಿತದೊಳು ಕಾಣು ರವಿತೇಜ //321//

ಮರುಳಾಗದೆ ಪಡೆದುದಕೆ
ಅರಳು ತಿರುಳನು ಹೀರಿ
ಹಿರಿಹಿಗ್ಗದೆ ಸಿರಿಕಗ್ಗವಾಗು ರವಿತೇಜ //322//

ತುಣುಕ ತಿಣುಕದಿರು ಅರಿತೆನೆಂದು
ಹೊರಗಣ್ಗೆ ಸಂವಾದಿಯಾಗೆ ಒಳಗಣ್ಣು
ಅರಿವುದು ಸಮಷ್ಟಿ ದಾಟಿ ವ್ಯಷ್ಟಿಯನು ರವಿತೇಜ //323//

ಯುಕ್ತವಾದುವು ಯುತವಾಗಿ ನಡೆಯೆ
ನ್ಯಾಯ ಯತದಿ ಧರ್ಮ ಬೆಳಗಿಪುದು
ಸಾಗರದ ಬಡಬವೂ ಬಾಡುವುದು ರವಿತೇಜ / /324//

ಯುತ=ಕೂಡಿ, ಯತ=ಮೇಲೆತ್ತುವುದು, ಬಡಬ= ಬಡಬಾಗ್ನಿ

ತಾಯಿಯಂತೆ ಮಗಳಾಗದಿದ್ದರೂ
ನೂಲಿನಂತಾಗುವುದು ಸೀರೆ
ಕೃಷ್ಣಾರ್ಜುನರಂತಿರಲಿ ಗೆಳೆತನವ ನೂಲ್ವ ಎಳೆ ರವಿತೇಜ //325//

ಫಲ್ಗುಣಗುಣ ಶುಕಾಕ್ಷಿ ಭೇದನಲಕ್ಷ್ಯ
ಕರ್ಣ ಬೀಡಾಡಿ ಲಕ್ಷ್ಯ ನಿರ್ಲಕ್ಷ್ಯ
ಭದ್ರತಳವಿರೆ ಸುಭದ್ರ ಕಟ್ಟಡ ರವಿತೇಜ //326//

ಸತ್ಯಾಸತ್ಯತೆಗಳ ಸಹ್ಯಾಸಹ್ಯತೆ
ಇಷ್ಟಾನಿಷ್ಟಗಳ ನಿರ್ಧಾರ ಆಗುವುದು
ನ್ಯಾಯಾನ್ಯಾಯಗಳ ನಿರ್ಭರ ನಿಕಷಗಳಲಿ ರವಿತೇಜ //327//

ಶೀತವೆಂದರೆ ನಡುಗಿ
ಉಷ್ಣವೆಂದರೆ ಶಿರಕವುಚಿ
ಕನಸು ಕಮರಿಸದಿರು ರವಿತೇಜ //328//

ಪ್ರೇಮ ಮೋಹಗಳ ಮಧ್ಯ ಲಕ್ಷ್ಮಣರೇಖೆ
ದಾಟಲು ಬದುಕು ದುಷ್ಟಸನ್ಯಾಸಿ ಪಾಲು
ರಾಮ ರಾವಣ ಸಂಗ್ರಾಮಕಣಿ ರವಿತೇಜ //329//

ಹುಟ್ಟುಸಾವಿನ ಈಚೆ – ಆಚೆಯೆಂಬ
ವಿತಂಡದಿ ಮುಳುಗದೆ ತಿಳಿದು ಬಾಳು
ನಡುವಿನ ಚಂದದ ಬದುಕು ರವಿತೇಜ //330//

ಮನಸೆಳೆಯಲು ಕೆಳೆಯೆ ಮುಗುಳು
ಮನಬೆಸೆಯಲು ಪ್ರೇಮದ ಅರಳು
ಕೆಳೆಯರಳೆ ಅಧ್ಯಾತ್ಮವೆ ಹುರುಳು ರವಿತೇಜ //331//

ಬೆಳೆಸು ಎದೆ ಕಸುವ ಜತನದಿ
ಕುದುರುವುದು ವಿಶ್ವಾಸ ನಡೆನುಡಿಗೆ
ಸ್ಫುರಿಸಿ ಭರವಸೆಯ ಬೆಳಕನು ರವಿತೇಜ //332//

ತೋಳ್ತೊಡೆ ಬುದ್ಧಿಭಾವ ಸಮವಿರಲು
ಭಾಸದಿಂದಲ್ಲ ಹನುಮ ಬಸದಿಂದ
ರಾಮನಿಗಾದ ಮಂತ್ರಿ ಸೇನಾಪತಿ ರವಿತೇಜ //333//

ಬಸ=ಹಿಡಿತ, ಸಾಧ್ಯವಾಗಿಸುವಂತಹ ಶಕ್ತಿ

ಎಡವಿದೆಡೆ ಎಚ್ಚರಿಸು
ಗೆದ್ದೆಡೆ ಗೌರವಿಸು
ಸವಿನುಡಿಯೇ ಜೇನಲ್ಲ ರವಿತೇಜ //334//

“ಶರೀರಮಾಧ್ಯಂ ಖಲು ಧರ್ಮ ಸಾಧನಂ”
ಸಾರ್ಥಕವಹುದು ದುಡಿವ ಕಾಯದೊಳು
ತುಡಿವ ಮನವಿದ್ದರೆ ರವಿತೇಜ //335//

ಸ್ಪರ್ಧಿಸು ನಿನ್ನ ಮನ ಕಾಯದೊಡನೆ
ವರ್ಧಿಸುವೆ ಎಲ್ಲರೊಡನೆ
ಗೆಲ್ಲುಗಳ ಚಿಗುರಿಪುದೆ ಗೆಲುವು ರವಿತೇಜ //336//

ಸ್ಪರ್ಧೆಯಲ್ಲ ಭರತನೊಂದಿಗೆ
ಬೆಳುಗೊಳದ ಕಿರುನಗೆಯು
ಗೊಮಟಗೆ ಗೊಮಟನೊಂದಿಗೆ ರವಿತೇಜ //337//

ಅಚ್ಚರಿಯೆ ಬದುಕಿನ ಬಗೆ
ಒರಳುಕಲ್ಲಿನ ಚರಿತವದು
ರುಬ್ಬಲುಬ್ಬುವುದು ಹುದುಗು ರವಿತೇಜ //338//

ಒಳಗನು ಬಗೆಬಗೆಯಲಿ ಪ್ರಶ್ನಿಸು
ಆತ್ಮವಿಕಾಸವನು ಗರಿಗರಿ ಗಟ್ಟಿಸು
ಆತ್ಮವಿಮರ್ಶೆಯೆ ಆತ್ಮವಿಶ್ವಾಸದ ದಾರಿ ರವಿತೇಜ //339//

ಮರೆಯದಿರು ಮಾಡಿದವರನ್ನು
ಕೃತಜ್ಞತೆಯಲುಂಟು ಕೃತಕೃತ್ಯತೆ
ಕೃತಕ ನಡೆನುಡಿ ವಿಕೃತವು ರವಿತೇಜ //340//

ಮೆಚ್ಚುಗೆ ಮೆಲುನುಡಿ ಮೌನ
ಚುಚ್ಚು ಎಚ್ಚರ ಸರಸ ಸಂವಹನ
ಕಾಡದೆ ಕಾಪಿಡುವ ಸಮರಸವು ರವಿತೇಜ //341//

ಎಳೆಬಿಸಿಲಿಗೆ ಅರಳಿ ಬಿರುಬಿಸಿಲಿಗೆ
ಬಾಡುವ ಹೂ ಒಡನಾಟ
ದೇಶ ಕಾಲದ ಮಾಟ ರವಿತೇಜ //342//

ಲಾಕ್ಷಾಗೃಹದ ಶಿಲ್ಪಿ ಪುರೋಚನನಂತೆ
ಮಿಥ್ಯ ಸ್ವಬಲಿಯಾಗಲು ಲಾಕ್ಷದಲಕ್ಷ್ಯ ಪಾಂಡವರು
ಸತ್ಯದಂತುಳಿಯುವರು ರವಿತೇಜ //343//

ನೆಲಕೂರಿ ಜಿಗಿ ಮುಗಿಲಿಗೆ ಬೆಳೆಯಲೆತ್ನಿಸಿ
ಯಾರಕಂಕುಳಲೊ ಬಸವಳಿದು
ಬಾಡುವ ಬದನಿಕೆಯಾಗದಿರು ರವಿತೇಜ //344//

ಗುರುವಿಗೆ ಗುಹೆಗಹ್ವರಾರಣ್ಯಗಳಲೇಕೆ
ಅರಸುವೆ ಮುಮುಕ್ಷುವೆ ಅರಸು
ನಿನ್ನಮನವೆಂಬ ಗಹ್ವರದಲಿ ರವಿತೇಜ //345//

ಕ್ಷಣಕ್ಷಣಕು ಅವಸ್ಥಾಂತರವಾಗುತ್ತಿರುವ
ವಿಶ್ವದಲಿ ಕೊನೆಯೆಂಬುದಿಲ್ಲವೆಂದರಿತ ಕ್ಷಣ
ನಾನೆಂಬುದಳಿದು ನೀನಾಗುವೆ ವಿಶ್ವಚೇತನ ರವಿತೇಜ //346//

ಶತಕದ ಚಳಕ ಬ್ಯಾಟು ಬೀಸುವುದಲ್ಲ
ಚಂಡೆಸೆವ ವೇಗ ನೀಳ್ಪು ಪುಟಿ ತಿರುವು
ಆಕ್ರಮಣ ಚಿಂತನೆಯನಳೆದು ಆಡುವುದು ರವಿತೇಜ //347//

ನೀಳ್ಪು= ಉದ್ದ(length)

ಮೋಡಿಮಾತಲಿ ಅಮಲು ತುಂಬಿ
ಮಣ್ಣುಣಿಸುವವರು ತಣಿಸರು ಉದರದುರಿ
ಒರೆಗಿಕ್ಕಿ ನೋಡವರ ನಡೆನುಡಿಯ ರವಿತೇಜ //348//

ಸೀತೆ ರಾಮಂಗೆ ಸತ್ಯ ರಾವಣಗಸತ್ಯ
ರಾವಣನಳಿದು ರಾಮಕಕ್ಷೆಗೆ ಬರಲು ಸೀತೆ
ಬೇಕು ನಕ್ಷೆ ಹೋರಾಟದ ದೀಕ್ಷೆ ರವಿತೇಜ //349//

ಮಾತಬೋನವ ಬಡಿಸಿ ಬಡಿವಾರ ಬಡಿಯದಿರು
ಹದಗೊಳಿಸು ಹೃದಯವನು
ಅನುಕಂಪದ ಕಂಪು ಕಂಪನದಿ ರವಿತೇಜ //350//

ಸಮವಿರದ್ದೈದು ಬೆರಳು
ಪೂರಕವು ಒಂದಕ್ಕಿನ್ನೊಂದು
ಪ್ರತಿಯೊಂದು ವಿಶೇಷವು ರವಿತೇಜ //351//

ನೇಮ ಮುರಿದು ಸಾಲ್ವಪ್ರೇಮಿಯನ್ನು
ಹೊತ್ತೊಯ್ದು ದೇವವ್ರತ ಮರೆತ
ಗುರಿಯಷ್ಟೆ ದಾರಿ ಶ್ರೇಷ್ಠವೆಂಬುದನು ರವಿತೇಜ //352//

ಭಿಕ್ಷಕ್ಕೆ ಬಂದ ದಶಶಿರನ ಮನವ
ರಾಯಭಾರಿ ಕೃಷ್ಣನೊಳಮರ್ಮವ
ಅರಿಯಲಹುದೆ ಹೊರನೋಟದಿಂ ರವಿತೇಜ //353//

ತುಟಿಯ ಮೇಲಿನ ನಗುವು
ತುಟಿಯಾಚೆಯ ನುಡಿಯು
ಆನಂದಕಳತೆಗೋಲಹುದೆ ರವಿತೇಜ //354//

ಅರ್ಹರಿಗಲ್ಲವೆ ಮೆಚ್ಚುಗೆಯ ಸಕ್ಕರೆಯಚ್ಚು
ಉಂಗುರವಿತ್ತು ಲಂಕೆ ಸುಟ್ಟ ಹನುಮನ ಕೆಚ್ಚು
ಬಡಬಡಿಸದೆ ಬಿಡಿಸು ಗೆಲುವಿನ ಗುಟ್ಟು ರವಿತೇಜ //355//

ನಿಜಭಾವಕೆ ಸೋಗಿನ ನಡೆನುಡಿಯಿಂ
ಬೆರಗತೆರೆಯನೆಳಯಲಹುದೆ
ಬಿರುಸಿನ ಝುರಿ ನೂರಾಗಿಸದೆ ನೊರಜುಕಲ್ಲಂ ರವಿತೇಜ //356//

ಜಗದಿ ಕಣಕಣದ ಕ್ಷಣಕ್ಷಣದ
ಸಂಭವಕೆ ಕಾರಣವುಂಟು ಶೋಧಿಸದೆ
ಶರಣೆನ್ನದಿರು ಮೌಢ್ಯಕೆ ರವಿತೇಜ //357//

ಮುಂದೆ ನಡೆದು ಮೊದಲಿಗನೆನ್ನದಿರು
ಹಿಂದೆ ನಡೆದು ಹಿಂಬಾಲಕನೆನ್ನದಿರು
ಕೂಡುಹೆಜ್ಜೆಗೆ ಹೊಯ್ಕೈ ಆಗು ನೀ ರವಿತೇಜ //358//

ಕಾಣ್ಕೆಯಾಗದು ಹೊರಹೊದ್ದಬಟ್ಟೆ
ಹೆಚ್ಚೆಂದರೆ ತೋರುವುದು ರೂಪಜಾಣ್ಮೆ
ಒಳಗಣ್ಣ ಬೆಳಕೆ ಕಾಣ್ಕೆಯಹುದು ರವಿತೇಜ //359//

ಗಿಡಕೆ ಗೆಲ್ಲೆ ಗೆಲುವು
ತುಂಬುಗಲ್ಲ ಶ್ರೇಷ್ಠಿಗೆ ಗೆಲುವು
ನಾನೆಂಬುದ ಗೆಲಿಯೆ ನರಂಗೆ ಗೆಲುವು ರವಿತೇಜ //360//

ಕಾಲವೊಂದುಂಟು ಕೂಡಿ ಕಳೆಯಲು
ಕಾಲವೊಂದುಂಟು ಭಾಗಿಸಿ ಗುಣಿಸಲು
ಗಣಿಸಿ ಹದಗೊಳಿಸು ಜೀವನವ ರವಿತೇಜ //361//

ದೃಢಸತ್ವವನೊಳಗಿಳಿಸಿ ಕಾಪಿಟ್ಟು
ಕೂಡಿಟ್ಟ ಅಹಮುಗಳ ಕರಗಿಸಿ
ಸರಳಗೊಳುವುದು ಸರಳವಲ್ಲ ರವಿತೇಜ //362//

ಎರಡು ಕಾಲಿಹುದು ಕೂಡಿ ನಡೆಯಲು
ಎರಡು ಕೈ ಜಗವ ಬಾಚಿತಬ್ಬಲು
ಎರಡಿಲ್ಲದ ಎದೆಗೂಡೆ ಬದುಕು ರವಿತೇಜ //363//

ಸೋಗಲ್ಲ ಸೊಗವಿರಲಿ
ಸೊಗಡಾವುದು ಚರಿತ
ಬಣ್ಣದಕಣ್ಣು ಕಳಚು ರವಿತೇಜ //364//

ತೆರೆಸರಿಸಿ ಕಣ್ತೆರೆ ಕಾಣ್ವುದು
ಭೌತಿಕರೂಪದೊಳಗಣ ವಾಸ್ತವ
ಅರಿವಿನ ಹರಿವಿನೊಳ್ ಸತ್ಯದ ಪಾಕ ರವಿತೇಜ. //365//

ಚಿತ್ತಕ್ಕೆ ಉಡಿಸಲಿ ತಿರುಳು
ಕೈಗೂಡಲಿ ಅಕ್ಷರದ ಹರಳು
ಕೊರಳಾಗಲಿ ಕರುಳು ರವಿತೇಜ //366//

ಅಜ್ಜನಲಲ್ಲ ಅರಕದಲಿ ಸಿಹಿಯು
ಕುಜ್ಜನಲಲ್ಲ ಹೂವಿನಲಿ ಗಂಧವು
ತೋರ್ಕೆಯಲಲ್ಲ ಭಕ್ತಿಯಲಿ ಬೆಳಕು ರವಿತೇಜ //367//

ಅರಕ= ಜೀರ್ಣವಾಗುವ ಪ್ರಕ್ರಿಯೆ

ಬಾಳೆ ಹಣ್ಣಾಗಲು ಕಾಯ ಬಲಿತಿರಬೇಕು
ಬಿಸಿಲರಸ ಕುಡಿದು ರಸಕೂಡಬೇಕು
ಗಟ್ಟಿತನುವಲಿ ಮೃದುತನವಿರಬೇಕು ರವಿತೇಜ //368//

ತಗ್ಗಿದ್ದೆಡೆಗೆ ನೀರು ನುಗ್ಗುವುದು
ಸಹಜ ನೀರಿನ ಓಟ
ಛಲ ಸಹಜವಿರಲಿ ರವಿತೇಜ //369//

ಆಗಲೆಂದರೆ ಸಂಕಲ್ಪ
ಮನ ಕಾಯದ ಯೋಗ
ಉಡಿಯಲಿ ಸಿದ್ಧಿಫಲ ರವಿತೇಜ //370//

ತಟ್ಟೆಲಿಹುದುಂಡು ಜೀರ್ಣಿಸು ಮೊದಲು
ಅಟ್ಟದಲಿ ಒಟ್ಟದಿರು ಆಶಾಬುತ್ತಿಗಳ ರಾಶಿ
ಬೇಕುಗಳ ಬೆಂಬತ್ತದೆ ಇರುವುದಾಶ್ರಯಿಸು ರವಿತೇಜ //371//

ಸೃಷ್ಟಿ ವೃಷ್ಟಿಯ ಬೆಳಕು
ಅನುಬದ್ಧವದರ ಸರಕು
ತಾಳ ತಪ್ಪಿದರೆ ಬದುಕು ಮುರುಕು ರವಿತೇಜ //372//

ಅನುಬದ್ಧ= ಕೂಡಿದ, ಸೇರಿದ,

ಅರಸು ಅರಿವನೆದೆಗೂಡಿನಲಿ
ಇಲ್ಲವದು ಕಾಡುಮೇಡು ಬಾನು ಕಡಲಿನಲಿ
ಒಳಗಿಹ ಗುರುವನಾಲೈಸು ರವಿತೇಜ //373//

ಹಂಬಲವ ಬೆಂಬತ್ತು ದೃಢಮನದಿ
ಹಪಹಪಿಸಿದರೆ ಸಿಗದು ಮುತ್ತುಮಣಿ
ಚಪಲವಲ್ಲ ಛಲವೇ ಬಲವು ರವಿತೇಜ //374//

ಮನುಜ ಮನವೆ ಪರಮಾಣು ಅಸ್ತ್ರ
ಪರಿಣಾಮವರಿತು ಪ್ರಯೋಗಿಸು
ಎಲ್ಲ ಅವದೆಂದು ಕೈಚೆಲ್ಲದಿರು ರವಿತೇಜ //375//

ಸೃಷ್ಟಿಯಲುಂಟೇನು ನಿನಗಷ್ಟು ಪಾಲು
ಮಂಡಿಗೆಗೆ ಹಕ್ಕು ಮಂಡಿಸುವೆಯೇನು
ಮುಂಡಿಗೆಯ ಬಿಡಿಸಣ್ಣ ನೀನದರ ಕಣವು ರವಿತೇಜ //376//

ಉದ್ಧಟಗೆ ತಟ ಸಿಗುವುದೆಂತು
ಉತ್ತರಗೆ ಪೌರುಷವೆಂತು
ಉದ್ಧವನಾಗೆ ಕೃಷ್ಣನುತ್ತರ ಅಂತು ರವಿತೇಜ //377//

ಕಲ್ಪನೆಯ ಕೂಸಲ್ಲ ಸ್ವಾತಂತ್ರ್ಯ ಕಲ್ಪ
ದುಡಿದು ಪಡೆಯುವ ಸಂಕಲ್ಪ
ಒಗ್ಗೂಡಿ ನಡೆವ ಅರ್ಥಶಿಲ್ಪ ರವಿತೇಜ //378//

ಶ್ವಾಸಗಟ್ಟಿಸಿ ಚಿತ್ತಕ್ಕೆ ತಿಳಿಗಾಳಿ ಸರಿಸಿ ಅತತ್ತ
ಶಕುನಿಯಾಟದ ನೆತ್ತ ಇಳಿಸುವುದೆ ಮತ್ತ
ಸ್ವಯಂಬಂಧಿಗೆಂತು ಸ್ವತಂತ್ರ ರವಿತೇಜ //379//

ನೆತ್ತ=ದಾಳ

ಎತ್ತು ಏರಿಗೆಳೆಯೆ ಕೋಣ ನೀರಿಗೆ
ಓಡುವುದೆ ಚಕ್ಕಡಿಯು ರಸ್ತೆಯೊಳಗೆ
ಬೇಕು ಮೂಗುದಾರದ ಹಿಡಿತ ಚಬುಕಿನಾಟ ರವಿತೇಜ //380//

ಆರಕ್ಕೆ ಏರದಿರು ಮೂರಕ್ಕೆ ಇಳಿಯದಿರು
ಅಬ್ಬರದಿ ಉಬ್ಬರಿಸದೆ ಸಮಸ್ಥಿತಿಯನರಸು
ಚಿದಾನಂದವಲ್ಲುಂಟು ರವಿತೇಜ //381//

ಸಾಲ ಮಾಡಿದರೆ
ಅಮಲು ನೀಗುವುದು
ಜಾಣ್ಮೆ ಅರೆಮಂಪರಿನಿಂದಲಾದ ರವಿತೇಜ ॥382॥

ಅಮಲು= ಮತ್ತಿನಲ್ಲಿದ್ದ. ಅರೆಮಂಪರು=ನಿದ್ರೆ

ಹಿಗ್ಗುವುದು ಸರಿಯಲ್ಲ
ಕುಗ್ಗುವುದು ಸರಿಯಲ್ಲ
ಹಿಗ್ಗು ಕುಗ್ಗುಗಳ ಮಧ್ಯೆ ಹಸನು ರವಿತೇಜ ॥383॥

ನಡೆ ಸಹಜವಿರಲಿ
ಹೊಂದಿಕೆ ಎದೆಯಿರಲಿ
ಸಂಬಂಧ ಮಾತಿನ ತೊತ್ತಲ್ಲ ರವಿತೇಜ ॥384॥

ಆನಂದಿಸು ವರ್ಣ ವೈವಿಧ್ಯವನು
ಅಳೆಯದೆ ವರ್ಣದಲಿ ಮನುಜನನು
ಕೆಂಪುರಕ್ತದ ಹನಿಹನಿ ಕಾಣು ರವಿತೇಜ ॥385॥

ಕಾವಳದಿ ಕಳೆಯದಿರು
ದಾರಿಗಿರಲಿ ದೊಂದಿ
ಬತ್ತಿಯೆಣ್ಣೆ ಬತ್ತದಿರಲಿ ರವಿತೇಜ //386//

ಜೇಬು ಝಣಝಣಿಸಿರೆ ನೆಮ್ಮದಿಯೆ
ಮೆತ್ತನೆಯ ಹಾಸೇ ಸುಖನಿದ್ದೆಗೆ
ಇದ್ದುದರಲಿ ತೃಪ್ತಿಯಿರೆ ಬಡತನವೆಲ್ಲಿ ರವಿತೇಜ //387//

ಸ್ವಚ್ಛತೆಗೆ ಸಾರಣೆಯು
ಸೌಮ್ಯತೆಗೆ ಸೈರಣೆಯು
ಗಮ್ಯಕ್ಕಿರಲಿ ಮಣೆಯು ರವಿತೇಜ //388//

ಸುಜ್ಞಾನದ ಸುಮೇರಿಗೆ
ಸತತ ಯತ್ನವೆ ತೇರು
ಬಿಡಿಸಿ ನಡೆವುದೆ ಬಾಳು ರವಿತೇಜ //389//

ಹೋಲಿಕೆಯಿಂ ಹಲಬು
ಬಿಡೆಯಿಂ ನಡೆ
ನೀನು ನೀನಾಗು ರವಿತೇಜ //390//

ಬಿಡೆ=ಖಂಡಿತವಾಗಿ

ಶಕುನಿ ಇಹನೆಲ್ಲಡೆಯು
ಜಾದೂದಾಳದ ಸಂಚು ಬಾಳ
ಪಗಡೆಯಲಿ ಜಾಗರದ ನಡೆ ಲೇಸು ರವಿತೇಜ //391//

ಕುತೂಹಲದಲಿ ಛಲವಿರಲು
ಜ್ಯೋತಿರ್ವರ್ಷಗಳು ದೂರವೆ
ವ್ಯೋಮದಿ ಕಂಡಾವು ನಮ್ಮ ಹೆಜ್ಜೆ ರವಿತೇಜ //392//

ತೈಲಪಾತ್ರೆಯಲಿ ಮೀನಕಣ್ಣು
ಪಾಂಡವಗೆ ದ್ರುಪದನ ಹೆಣ್ಣು
ಪರಿಶ್ರಮದ ಪ್ರಭೆಯು ರವಿತೇಜ //393//

ದಂಡ ಕಮಂಡಲದೊಡನೆ ಶಸ್ತ್ರ
ಪರಶು ನಡೆ ಗೆಲುವಿನ ಶಾಸ್ತ್ರ
ಮನದಿಂಗಿತದಿ ನಂಬಿಕೆಯು ರವಿತೇಜ //394//

ಕೆಡಕೆನಿಪುದಿಂದು ನಾಳೆಯೊಳಿತು
ಕಾಲನ ಕಿಂಕಿಣಿಗೆ ಕದಪು ಹೊಳಪು
ಬಾಣಲೆಯ ಬಿಸಿ ಹದವಿರಲಿ ರವಿತೇಜ //395//

ಅರಿವಿದ್ದೂ ಅರಿಗೆದ್ದವಳ
ಮೀಯಿಸಿದ್ದಗ್ನಿಯೊಳು
ಅಳತೆಗೋಲೇನು ಧರ್ಮಕ್ಕೆ ರವಿತೇಜ //396//

ಚಿತ್ತದಂಗಡಿಯಲಿ ತರತರದ ಮಾಲು
ಇಂದು ನಾಳೆಗೆ ಬೇರೆ ಬೇರೆಯೆ ಬೆಲೆಯು
ವಿಚಕ್ಷಣೆಯ ಸೂತ್ರವು ಮೇಲು ರವಿತೇಜ //397//

ಕೂಡಿ ಕಳೆದರೆ ಫಲಿತವದು ಶೂನ್ಯ
ಶೂನ್ಯಾಧಿಪತಿ ಜಗಮಾನ್ಯ
ಋಣಕಳೆದು ನಡೆದುಬಿಡು ರವಿತೇಜ //398//

ಮರೆಯದಿರು ಮಾಡಿದವರನ್ನು
ಕೃತಜ್ಞತೆಯಲುಂಟು ಕೃತಕೃತ್ಯತೆ
ಕೃತಕ ನಡೆನುಡಿ ವಿಕೃತವು ರವಿತೇಜ //399//

ಬಿಡದಿಗೊಂದಂಗಳವ ಕಟ್ಟಲುಬೇಕು
ಇಟ್ಟಂಗಿಯೊಳು ಭಟ್ಟಂಗಿ ಇರದಿರಬೇಕು
ಇರುವುದರಲಿ ಗೆಲ್ವಚೆಲುವಿರಬೇಕು ರವಿತೇಜ //400//

ಗ್ಯಾಸು ಚೇಂಬರದಲ್ಲಿ ಸತ್ತರೇನ್ ಯಹೂದಿಗಳು
ಆರ್ಯರಕ್ತವೆನುತ ಗೆದ್ದನೇನ್ ಹಿಟ್ಲರನು
ಸಮಭಾವವೇ ಶ್ರೇಷ್ಠತೆಯ ಸೊಬಗು ರವಿತೇಜ //401//

ವಿಶ್ವದಂಚಿಗೆ ನೆಗೆವ ಅಶ್ವವುಂಟೆ
ಅಂಚು ಆಚೆಯ ಹುಡುಕಲುಂಟೆ
ಅಣುವಲ್ಲಿ ಅನಂತ ವಿಶ್ವವುಂಟೆ ರವಿತೇಜ //402//

ಗರಪು ಹೊರಹೊಳಪು
ಚರಪು ಒಳಬೆಳಕು
ಮೂಲದ್ರವ್ಯವೆ ರಸವು ರವಿತೇಜ //403//

ಗರಪು=ಮೇಲ್ಪ್ರೈ

ಬಾಂದಳದಿ ಬಿತ್ತ ಕನಸುಗಳು
ನನಸಾಗಲೆಂತು ಉತ್ತು ಬಿತ್ತದನು
ಬುವಿಯಲಿ ನೀರನೆರದು ರವಿತೇಜ //404//

ನಾಕ ಸಿಕ್ಕಿದಂತರಳಿದಳು ದೇವಕಿಯು
ಕಂಡು ಕೃಷ್ಣನ ಹುಟ್ಟು ಸೆರೆಮನೆಯ
ಸರಳೊಳಗೂ ಸುಖವಿತ್ತು ರವಿತೇಜ //405//

ನಾನೆಂಬುದಿರಬೇಕು ಆತ್ಮವಿಶ್ವಾಸಕೆ
ನಾನೆಂಬುದಾಗಬಾರದು ಆತ್ಮರತಿಗೆ
ನಾನು ನೀನಾಗುವುದು ಸಾಕ್ಷಾತ್ಕಾರಕೆ ರವಿತೇಜ //406//

ವಂಶವಾಹಿಯ ಶ್ರೇಷ್ಠತೆಗೆ ಅಂಕಿತವಿತ್ತವರಾರು
ಶುದ್ಧಜನಾಂಗದ ಡಂಭ ನಾಜಿಯ ಕನಸು
ಪ್ರಕೃತಿಯಲೆಲ್ಲ ಶುದ್ಧವು ರವಿತೇಜ //407//

ಅಂತಃಸತ್ವಕೆ ಬೇಕು ಅಂತರ್ ವೀಕ್ಷಣೆ
ಬೀಜವೊಂದಿರಲು ಕಾಳುಗಳು ಬೇರಹುದೆ
ಮಂಥನವಿರಲಿ ನಿರಂತರ ರವಿತೇಜ //408//

ಒಡಲ ಕಲರವ ಕಣ್ಣಾಗಲಿ
ಕಲಕಿ ಹುಣ್ಣಾಗದಿರಲಿ
ಸಂಕುಲಕೆ ಸಂಜೀವಿನಿಯಾಗಲಿ ರವಿತೇಜ //409//

ಹರಿದ ಓಜೋನ್ ಹೊಲಿವ
ನಾವು ಮಾಡಿದ ಮಾಲಿನ್ಯವ ತೊಳೆವ
ಶಕುತಿಗೆ ತಲೆಬಾಗು ರವಿತೇಜ //410//

ಅಲೆಕ್ಸ ನೆಪೋಲಿ ಹಿಟ್ಲರುಗಳು
ಗೆದ್ದರೇನ್ ಜಗವನ್ನು
ಕಲಿತರೇನ್ ಪಾಠವನ್ನು ರವಿತೇಜ //411//

ಹೆದರದಿರು ಹೆರವರಿಗೆ
ಬಾಗದಿರು ಪೊಗರಿಗೆ
ಮನವಾಗಲಿ ನಿಕಷ ರವಿತೇಜ //412//

ತೆರೆದಿರಲಿ ಎದೆ
ಗೊಗ್ಗರದ ಗೂಡಾಗದೆ
ಗೆಳೆತನವು ಬರಡಾಗದೆ ರವಿತೇಜ //413//

ಬದುಕಿಗರಸನಾಗಲು
ಅರಸು ಅಂತರ್ಯವನು
ನೆಲೆನಿಲಿಸಿ ಗುರಿಯನು ರವಿತೇಜ //414//

ನೀನು ಏನೆಂದರೆಯದೆ
ಅವನನೆಂತು ಅರಿವೆ
ನಿನ್ನಾಳದ ಗಟ್ಟಿತನವನರಿ ರವಿತೇಜ //415//

ವೇಗಿ ನಿಧಾನಿ ಗೂಗ್ಲಿ ಚೆಂಡೆಡ ಬಲ
ತಿರುಗೆರುಗಿಪ ಸ್ಪಿನ್ನಿಗ, ತರತರ ಶೈಲಿಯು
ವಿಕೆಟ್ಟು ಮುರಿವುದೆ ಗುರಿಯು ರವಿತೇಜ //416//

ನಿನ್ನ ಕೆಲಸವ ನೀ ಮಾಡು
ಇನ್ನಾರು ಮಾಡರದನು
ಫಲಿತವದು ಕಾಲ ಕೂಡಿಬರಲು ರವಿತೇಜ //417//

ಬೇಸಿಗೆಯ ಕಾವಿಗೆ ಹಪಹಪಿ ಮಳೆಗೆ
ಚಳಿಯೀವ ಮುದಕೆ ಕಾರಣವು ಬುವಿಯು
ತನ್ನಕ್ಷದಲಿ ಸುತ್ತುವುದು ನಿರ್ಭಾವದಲಿ ರವಿತೇಜ //418//

ಗುಸುಗುಸುಗಳೆಷ್ಟೋ ಕೇಳಿಸದೆ
ಹೋಗುವುದು ಪಿಸುದನಿಗೆ ಕಿವಿ
ತೆರೆಯೆ ಬೆಳಕು ಕಾಣುವುದು ರವಿತೇಜ //419//

ದೇವನೆಂಬ ಪ್ರಶ್ನೆಗೆ ಬುದ್ಧನ ಮುಗುಳು
ಒರೆಯಿತು ಅರಿತಾಡು ಅರಿಯದಾಡಿದ
ನುಡಿಹೊಲ್ಲ ರವಿತೇಜ //420//

ನೂರುಭಿತ್ತಿ ಮೌನಕೆ
ಬಿಡಿಸಲುಂಟೆ ಚಿತ್ತಕೆ
ಹೊರಳು ಧ್ಯಾನಕೆ ರವಿತೇಜ //421//

ಸದ್ದಿರದ ಇರುವಂತೆ
ಸದ್ದಿನ ಗುದ್ದೂ ಮೌನ
ಅರ್ಥೈಸು ಸಹನ ರವಿತೇಜ //422//

ಮೌನ ಬೆಟ್ಟದ ಮೇಲೆ ಕಡು ಹಸಿರು ಬಾನು
ಒಳಗೆ ಕಡು ಕೆಂಪು ಜ್ವಾಲೆ
ಹದುಳ ಮೌನವ ಹುಡುಕಲೆಂತು ರವಿತೇಜ //423//

ತುಟಿ ಹೊಲಿಯೆ ಮೌನ
ಬಿರಿಯೆ ಶಬ್ದವೆಂಬುದು ಸರಿಯೇ
ಶವವೂ ಶಬ್ದ ಮಾಡುವುದು ರವಿತೇಜ //424//

ಮಾತು ಮೌನವಾದರೆ ಕರ್ಕಶವಿಲ್ಲ ಅನಬಹುದೆ
ಮೌನ ಮಾತಾಗಲು ಆಕರ್ಷವಾಗುವುದೆ
ಮೌನ ಮಾತಿನ ಮೀಟು ರವಿತೇಜ //425//

ಮೌನವಹುದೆ ಅಂತರಿಕ್ಷ
ಮೌನವಹುದೆ ಅಂತರಾಳ
ಮೌನದಿಂದಾಗುವುದೆ ನಿರಾಳ ರವಿತೇಜ //426//

ಮೌನದಲಿ ಚಿತ್ತಾಗದಿರು
ಮೌನವೊಂದು ನುಡಿಶಸ್ತ್ರ
ನಾಡಿಮಿಡಿತವೆ ಶಾಸ್ತ್ರ ರವಿತೇಜ //427//

ಪದಪದಗಳ ನಡುವಲಡಗಿದ
ಮೌನದ ಜಾಡು ಹಿಡಿದರರಿವೆ
ಮನದಲಡಿಗಿದ ಬಡಬಾಗ್ನಿ ರವಿತೇಜ //428//

ನಿಶ್ಚಲ ನಿರ್ಜೀವ ನಿರಾಕರಣೆಗಳಿಲ್ಲ
ಈ ವಿಶ್ವದಲಿ ಗುರುತ್ವದೆಳೆಯ ಅಕ್ಷ
ಚಲನೆಯೆಲೆಲ್ಲ ಸತ್ವ ರವಿತೇಜ //429//

ಕೇಳದೆ ಕನ್ನಡಿಯ ಅದೆಷ್ಟು ದಾರಿ
ಮುಖಬಿಂಬವ ತೋರಿದರೂ
ಒಡೆದೊಡನೆ ಅದನೆಸೆವರು ರವಿತೇಜ //430//

ಇರಬಹುದು ಈ ಜಗದಿ ನಾನೊಂದು ಚುಕ್ಕೆ
ಮೂಡುವುದೇ ಚುಕ್ಕೆಚುಕ್ಕೆಯಲಿ ನಾನಿರದೆ
ಈ ಜಗದ ನಕ್ಷೆ ರವಿತೇಜ //431//

ನೆಲದ ಸತ್ವವ ಹೀರಿ
ರವಿಯ ಬೆಳಕನು ಮಥಿಸಿ
ನಳನಳಿಸುವುದು ಜೀವ ರವಿತೇಜ //432//

ಇಂಬರಿದು ನಂಬೆಂದ ಸರ್ವಜ್ಞ
ಕಾಣದ ಕೂರಂಬುಗಳ ಅರಿವುದೆಂತು
ಇಂಬರಿವ ಹಂಬು ಹುಡುಕು ರವಿತೇಜ //433//

ಬೀಜದಲಿ ಸತ್ವವಿರೆ ಮಣ್ಣೊಡೆದು
ತೆನೆತೂಗಿ ತೊನೆಯುವುದು ಇಲ್ಲದೆಡೆ
ಮುರುಟಿ ಮಣ್ಣಾಗುವುದು ರವಿತೇಜ //434//

ನಿನ್ನಂತೆ ನೀನಿರು ಅನುಕರಿಸದೆ
ವಿಶಿಷ್ಟ ನೀ ಈ ಸೃಷ್ಟಿ ಸೊಬಗಲಿ
ಸಹಜತೆಯೆ ಸೌಂದರ್ಯ ರವಿತೇಜ //435//

ಏರಿಯೆಂದೇರದಿರೆ ಶಿಖರ ಬಾಗುವುದೆ
ಹೆಜ್ಜೆಯನೆತ್ತಿ ಊರಿ ನಡೆಯುತಿರು
ನೆತ್ತಿಯಲಿ ಬೆಳಕಾಗುವುದು ರವಿತೇಜ //436//

ಬಾಗಿಸದೆ ಬೆನ್ನು ಬಾಗಿಸು ಮನವನ್ನು
ಓಡದೆ ಒಡನಾಡಿಯಾಗಿ ಗಳಿಸು ಒಲವನ್ನು
ನೆನಕೆ ಹಾರೈಕೆಯೆ ನಡೆಯೆನ್ನು ರವಿತೇಜ //437//

ಕಾರಣವನರಸು ಕಟ್ಟಲು
ತುಂಬುವುದೊಲವ ಕೆಚ್ಚಲು
ಸದ್ಭಾವ ಸಹಜ ಮೆಟ್ಟಿಲು ರವಿತೇಜ //438//

ಶಿಲೆಯಡಗಿದ ಶಿಲ್ಪಕ್ಕೆ ಚಾಣದೇಟು
ರಾವಣಗೆ ರಾಮಬಾಣದೇಟು
ಚಾಣವೋ ಬಾಣವೋ ನಿನ್ನಾಯ್ಕೆ ಕಾಣಾ ರವಿತೇಜ //439//

ತರಾತುರಿಯಲಿ ಕೈಜಾರುವುದು ಗೆಲುವು
ದಿವ್ಯಾಯುಧವೊ ದಿವ್ಯೌಷಧವೋ
ಸಹನೆ ದಿವ್ಯತೆಯ ಬೆಳಕು ರವಿತೇಜ //440//

ಕಾಲ ಕೂಡಲು ಹಡೆವಳು ತಾಯಿ
ಅನಂತ ಸಹನೆಯವಳ ಅಂತಃಶಕ್ತಿ
ಮಗುವಿನಳು ಅವಳ ಗೆಲುವು ರವಿತೇಜ //441//

ಉಸಿರೊಂದೆ ಹಸಿವೊಂದೆ
ಮೈ ಮನದ ಸನದೊಂದೆ
ಮೂಗರಳಲಿ ಮಣ್ಣವಾಸನೆಗೆ ರವಿತೇಜ //442//

ಸನದು= ಅಧಿಕಾರ ಪತ್ರ

ಸಗ್ಗಕ್ಕೆಹಗ್ಗ ಕಟ್ಟಲು ತ್ರಿಶಂಕು
ನೇತಾಡಿಹನು ತಲೆಕೆಳಗಾಗಿ
ನೀನಿರೆ ನಿನ್ನ ಲಯದಲಿ ನಾಕ ತೆರೆವುದು ರವಿತೇಜ //443//

ರತಿಗೆ ರತ್ನದಹಾರ ಯತಿಗೆ ರುದ್ರಾಕ್ಷಿ
ಶ್ರೇಷ್ಠವವು ಸ್ಥಾನಗೌರವದಿ ಕಣಕಣವು
ಹಿರಿದು ಕರ್ತವ್ಯ ನಿರ್ವಹಣೆಯಲಿ ರವಿತೇಜ //444//

ಮೇಲುಕೀಳೆಂಬುದು ಮನುಜ ಸೃಷ್ಟಿ
ಸರ್ವಸಮವಿಹುದು ನಿಸರ್ಗ ದೃಷ್ಟಿ
ಸೃಷ್ಟಿ ದೃಷ್ಟಿಯಲಿ ಸಮಷ್ಟಿ ರವಿತೇಜ //445//

ಹದವಿಹುದು ತಿರೆಯಲಿ ಅಳು ನಗುವ ವರಸೆ
ಕಣ್ತುಂಬಿದ ವಿದಾಯಕೆ ಇರಲಿ
ನಗೆಯ ಭರವಸೆ ರವಿತೇಜ //446//

ಅಂಜದಿರು ಹೆಜ್ಜೆ ತೊಡರಿತೆಂದು
ಅರಿವೆ ಸರಿನಡೆಗೆ ತೋರುಗಂಬ
ಹೆಬ್ಬೆರಳಹಾರಂಗೆ ಬುದ್ಧನ ಬೆಳಕಂತೆ ರವಿತೇಜ //447//

ಹೆಬ್ಬೆರಳಹಾರಂಗೆ= ಅಂಗುಲಿಮಾಲನಿಗೆ

ಪರಿಪರಿಯ ಪರೆಯದುವೆ
ದೃಷ್ಟಿದೂಸರಗೊಳಲು ಸರಿಸಿ ನಡೆ
ಗುರಿಯೆಡೆಗೆ ಇಂಬು ನೆಚ್ಚುತಲಿ ರವಿತೇಜ //448//

ಕಟಕಟೆಯ ಸಾಕ್ಷ್ಯದಲಿ ಸಟೆ ಸತ್ಯವಾಗುವುದು
ನಿನ್ನೊಳಮನೆಯಲ್ಲಿ ನೀನೇ ಆರೋಪಿ
ಸಾಕ್ಷಿ ನ್ಯಾಯಾಧಿಪತಿಯು ರವಿತೇಜ //449//

ಕನಸುಗಳಿಲ್ಲದೆ ಬದುಕು ಬರಡು
ಕನಸುಗಳ ಕರಡು ತಿದ್ದಿ ತೀಡಿಳಿಸು
ಮನದಂಗಳದಿ ಬೆಳಸು ನನಸಬೆಳೆ ರವಿತೇಜ //450//

ಮನುಜ ಕುಲ ತಾನೊಂದೆ ವಲಂ
ಪಂಪ ನುಡಿ ಸಾಕ್ಷಾತ್ಕಾರಕೆ ಬೇಕು
ತಂಪು ಮನಂ ರವಿತೇಜ //451//

ನೀನೆಂತೊ ಅಂತಿರು
ಎಂತೋ ಆಗದಿರು
ಕಾಸಿಗೆ ತಕ್ಕ ಕಂತೆ ರವಿತೇಜ //452//

ಪಾಠವನೋದಲು ಪುರಾಣ ಕೇಳಲು
ತೆರೆಯದು ಸ್ವರ್ಗದ ಬಾಗಿಲು
ಪಳಗಿಸಿದ ಮನವೆ ಏಣಿಯ ಮೆಟ್ಟಿಲು ರವಿತೇಜ //453//

ಆಡುವ ಕೇಳುವ ಮಾತನಳೆದು ನೋಡು
ಹೆಕ್ಕದಿರು ಹುಳುಕು ನುಡಿಯನು
ಮನದ ಮೂಸೆಯ ಬೆಳಕು ಹದುಳದ ಹಾದಿ ರವಿತೇಜ //454//

ಬೆರಗಾಗದಿರು ಬೆಡಗು ನುಡಿಗೆ
ಗಮನಿಸೆಚ್ಚರದಿ ನಡಿಗೆ
ಹುಡುಕು ಎರಡಾಗದೆದೆಮಿಡಿತ ರವಿತೇಜ //455//

ಅಂಬಿಗನ ನಂಬಿ ನೆರೆಯ ದಾಟುವೆವು
ಇಂಬನರಿಯದ ನಂಬಿಕೆಯು
ಕಣೆಯಲುಗಿನಂತೆ ರವಿತೇಜ //456//

ನೋಟ ಕಾಣ್ಕೆಗಳು ಭಿನ್ನ
ಶಬ್ದ ಧ್ವನಿಗಳು ಭಿನ್ನ
ಕಾಣ್ಕೆಯ ಧ್ವನಿಯಾಗು ರವಿತೇಜ //457//

ಕಪ್ಪೆಲ್ಲ ಹಾಲಾಹಲವಲ್ಲ
ಬಿಳಿಯೆಲ್ಲ ಹಾಲಲ್ಲ
ತಪ್ಪೊಪ್ಪುಗಳು ಚಿತ್ತದ ಚಿತ್ರ ರವಿತೇಜ //458//

ಲಾಭ ಲೋಭ ಸ್ನೇಹ ಮೋಹಗಳ
ನಡುವಿರುವ ಎಳೆತಂತು
ಚಿತ್ತದೊಳಗೆ ರವಿತೇಜ //459//

ಪ್ರಾಣಿಪಕ್ಷಿಗಳು ಗಿಡಮರ ಬಳ್ಳಿಗಳು
ನದಿಪರ್ವತಗಳು ತಮ್ಮಂತೆ ತಾವಿಹವು
ನೀ ಹೊರತಲ್ಲ ಹೊರೆಯಾಗದಿರು ರವಿತೇಜ //460//

ಏಳುಬೀಳುಗಳೆಲ್ಲ ಮಜಾ ಸಜಾ ಅಲ್ಲ
ಸಹಜರಾಗ ಆಲಾಪಗಳು
ಏರಿಳಿತವದರ ರಸವು ರವಿತೇಜ //461//

ನೀನು ನೀನೇ ಏಸು
ಅರಿ ನೀ ಸಂತೆಯ ಬೊಂತೆ
ಕಟ್ಟು ನಿತ್ಯ ಸ್ಮರಣೆಯ ಕಂತೆ ರವಿತೇಜ //462//

ಎಂಥ ಧೀಮಂತನೋ ಏಸು
ಏಸು ಮೊಳೆಪೆಟ್ಟುಗಳ ಶಿಲುಬೆಯಲಿ ತಿನುತ
ತಪ್ಪುಗಾರರರಿಯರ್ ಕ್ಷಮಿಸೆಂದವ ರವಿತೇಜ //463//

ಕೌರವರೆಡೆ ಸುಕರ್ಣ
ರಾವಣನೆಡೆ ವಿಭೀಷಣ
ಅದುರದ ನಡೆಯಲಿ ಶೋಭಿಪರು ರವಿತೇಜ //464//

ರುಚಿಕಟ್ಟಲು ಹಾಲು ಸಕ್ಕರೆ
ಬೆರೆತಂತೆ ಒಂದನಿನ್ನೊಂದು
ಆವರಿಸುವುದು ಸ್ನೇಹ ಸಂಬಂಧ ರವಿತೇಜ //465//

ಆಕಾಶ ಮೇಲೆ ಬುವಿಯು ಕೆಳಗೇನು
ಬುವಿ ಮೇಲೆ ಆಕಾಶ ಕೆಳಗೇನು
ಮೇಲು ಕೆಳಗಿರದ ಹದಬಂಧ ರವಿತೇಜ //466//

ನುಡಿ ಮಡಿಯಲ್ಲ ಮುಡಿಯಲ್ಲ
ಮಡಿಲತುಡಿಯು ಗಡಿಬಿಡಿಯಿಲ್ಲದೆ
ಗಡಿದಾಟುವ ಮನದಮಿಡಿಯು ರವಿತೇಜ //467//

ಬಿಳಿಬಣ್ಣದ ಮೋಹಕೆ ಹುಂಕಾರಕೆ
ಜಗವಾಗಿದೆ ಬಡವು ಬೆಡಗೂ ಬೆರಗೂ
ದಾಟಿ ಬೆಳಗುವುದೇ ಮನವು ರವಿತೇಜ //468//

ತಪ್ಪು ಒಪ್ಪಿಗೆ ಬೇಕೆ ಚುಚ್ಚು ಮೆಚ್ಚುಗೆ
ಸಾಕ್ಷಿಯದಕೆ ತಿಳಿವು ಅರಿವು
ಹಾಗಿರೆ ಬದುಕು ಸಜ್ಜಿಗೆ ರವಿತೇಜ //469//

ತರತಮವುಂಟೆ ದೇಹದೆಡಬಲಕೆ
ಎಡದಲೇ ಹೃದಯವೆಂಬರಿವು
ಎರಡೊಂದೆಯಂಬೆಳಕು ಕಾಣ್ಕೆಯು ರವಿತೇಜ //470//

ಮನದ ಮಜಲುಗಳಲಿ ಗೋಜಲೇಕೆ
ಮಂಜು ಕರಗಿ ಹಾದಿ ಮಿನುಗುವುದು
ಸೂರ್ಯೋದಯದಿ ರವಿತೇಜ //471//

ಕೇಶ ಕಪ್ಪಿರಲು ಕಬ್ಬಿಣದ ಪದಕ
ಬಿಳಿಗೆ ಬೆಳ್ಳಿಯ ನೂಲು
ವಯಕೆ ತಕ್ಕಂತೆ ಅರಿವಿರಲಿ ರವಿತೇಜ //472//

ತಾಳ್ವ ಶಕ್ತಿಯಲಿಹುದು ಬಾಳ್ವ ಬೆರಗು
ಕಡಗೋಲ ಹೊಡೆತಕೆ ತಾನೆ
ಬೆಣ್ಣೆಯ ಬೆಡಗು ರವಿತೇಜ //473//

ಬೆಚ್ಚಗಿರಲೆದೆ ಬೆಚ್ಚು ಹಿತವಿರಬೇಕು
ಇಳಿತದಲೇರಿ ಏರಿಯಲಿಳಿದು
ಒಳಹೊರಗು ಕಾವ ಕಾಯಬೇಕು ರವಿತೇಜ //474//

ಶಕುನಿ ಹುಟ್ಟಿಸಿದ ಅನುಮಾನ
ಅಗ್ನಿಕನ್ನೆಗೆ ಅವಮಾನ
ಆಯ್ತು ಕುರುಕುಲಕೆ ಸ್ಮಶಾನ ರವಿತೇಜ //475//

ಹೊಳೆ ಹರಿವುದೇನ್ ತಂತಾನೆ
ಪಡೆದು ಹಳ್ಳಕೊಳ್ಳದ ಹನಿಯ ಉಡಿಗೆ
ಹೊಳೆವುದು ಹೊಳೆ ಹೆಮ್ಮೆಯಲಿ ರವಿತೇಜ //476//

ಬಂಧುರದ ಬಂಧುತ್ವಕೆ
ಬೆಚ್ಚನೆಚ್ಚರದೆರಕ ಬದುಕು
ಮುಗ್ಗಾಲಿನೋಟ ರವಿತೇಜ //477//

ಸುಗ್ಗಿಯಲ್ಲಿ ಮನವು ನೇಹ
ಸುಗ್ಗಿಯೇಕ ಬೆಳ್ಳಿಗೆ
ಸವಿರುಚಿಯ ಸಮ್ಮಿಳನ ವೇದ ರವಿತೇಜ ॥೪೭೯॥

ಹುಂಚಲ್ಲು ಹಾಲು
ಹಸ್ತೆ ನಿಂತ ಹಾಲು
ಬಯಲಾಗಿ ಹಾ ಬಳಿಕ ರವಿತೇಜ ॥೪೮೦॥

ಕೆಂಪಿನ ಬಣ್ಣ ಅಂದಕ್ಕಿಂತ
ಹಸ್ತದಲ್ಲಿ ತೊಡೆದ ಗಿಡ್ಡದಲ್ಲಿ
ಬಣ್ಣ ಬಿಟ್ಟು ಗೆಲುವಿನ ರವಿತೇಜ ॥೪೮೧॥

ನಾನು ನಾನೆಂದೆನಿಸದ
ನನ್ನೊಳಗೆ ನಾವಿರ ಗೆಲುವ ಹಾಕ
ನಾನೆಂಬ ನಾನೇ ನಾಬಂತ ನೀನೇ ರವಿತೇಜ ॥೪೮೨॥

ದೇವನ ಮುಡಿಯೇರುವ ಹೂವು
ಮರೆಯದಿರಲಿ ಬೇರ ಋಣ
ಗಾಳಿ ಬೆಳಕಿತ್ತ ಪ್ರಾಣ ರವಿತೇಜ //482//

ಸತ್ಯ ಸಾತತ್ಯ ನೀಡುವುದು ಸತ್ವಕ್ಕೆ
ಬಿರುಗಾಳಿಯಲಿ ಜ್ವಲಿಸುವುದು ಅಗ್ನಿ
ನಿರ್ಭಯವೆ ನಿನ್ನ ಜೊತೆಗಾರ ರವಿತೇಜ //483//

ಬೆನ್ನಿಗಂಟಿದ ಹಿನ್ನರಿವು
ಕಲ್ಪನೆಯ ಕೂಸಾಗದ ಮುನ್ನರಿವು
ವರ್ತಮಾನದ ದೀಪ ರವಿತೇಜ //484//

ಅಣು ರೇಣು ತೃಣ ಕಾಷ್ಠಕೆಲ್ಲ
ಒಲವನುಣಿಸುವ ಭೇದವಿಲ್ಲದೆ
ಸೃಷ್ಟಿಗೆ ಕಂಟಕ ಮನುಜ ಮಾತ್ರನೇ ರವಿತೇಜ //485//

ಸೋಲೆಂಬುದೆಲ್ಲುಂಟು ಗೆಲುವೆಂಬುದೆಲ್ಲಿ
ಸೋಲು ಗೆಲುವುಗಳು ಶಿಲ್ಪಿಯ ಚಾಣದೇಟು
ನಿನ್ನೇಳ್ಗೆಗೆ ನೀನೆ ಶಿಲ್ಪಿ ರವಿತೇಜ //486//

ಅರಿತು ನಿನ್ನೆಯನು
ಮರೆಯದೆ ನಾಳೆಯನು
ನನ್ನಿಯಲಿಡು ಇಂದಿನ ಹೆಜ್ಜೆಯನು ರವಿತೇಜ //487//

ಸುಳ್ಳಾಗಲಿ ಸೋಲು ಗೆಲುವು ಸೂಳು ಎನದಿರು
ಕಾರಣದಲಿ ಅವಿತ ಕಾರ್ಯವದು
ನೂರಕ್ಕೆ ನೂರೆಂಬ ಅಟ್ಟಕ್ಕೆ ಸೋಪಾನ ರವಿತೇಜ //488//

ಸೂಳು= ಕಾಲ, ಸಮಯ,ಸಂದರ್ಭ

ಬೆಸೆದುಕೊಂಡಿಹುದು ಕಾರ್ಯಕಾರಣವು
ಬೆಸಗೊಳು ನೀ ಬೆದರದೆ ಕಾರಣವ
ಸೋಪಾನವದು ಗೆಲುವ ಹೂರಣಕೆ ರವಿತೇಜ //489//

ಕಾಲರಾಯನ ಓಟಕ್ಕೆ ಒಡ್ಡುಕಟ್ಟಲುಂಟೆ
ಭಾವಿಪ ಭವಿಷ್ಯ ಕ್ಷಣದಲಿ ಭೂತವಾಗುವುದು
ವರ್ತಮಾನದರಿವೇ ಜೀವನವು ರವಿತೇಜ //490//

ಹಳ್ಳವಿರೆ ತುಂಬುವ ನೀರು
ತಗ್ಗಿರೆ ಹರಿಯುವುದು
ಹೇಗಾದರೂ ನೆಲ ತಣಿಯುವುದು ರವಿತೇಜ //491//

ಪಶ್ಚಾತ್ತಾಪದಿ ಬೆಂದ ಮನ
ಹುಟ್ಟಿಸೆ ಹಿಂಕಾಲದಲೆಡವಿದರಿವು
ಮುಂಕಾಲಕೆ ದಾರಿದೀಪ ರವಿತೇಜ //492//

ಮನುಜಗೊಂದಲ್ಲ ನೂರ್ಮುಖವು ತಮ್ಮ
ಒಂದೊಂದೆಡೆ ಒಂದೊಂದಾಟದ ಗುಮ್ಮ
ಮರ್ಯಾದೆಯೆಂಬ ತೋರುಗಾಣಿಕೆ ಸುಮ್ಮ ರವಿತೇಜ //493//

ಅಂದಂದಿಗೆ ಅಂದಂದಿನ ಗತಿ
ಕಾಲಗತಿಗಿಲ್ಲ ಹಿಂಚಲನೆಯ ಹಲ್ಲುಗಾಲಿ
ಹಳಹಳಿಸದೆ ಮುಂಗತಿಯ ನೇರ್ಪುಗೊಳಿಸು ರವಿತೇಜ //494//

ಹಲ್ಲುಗಾಲಿ=Gear

ಅವನಂತು ಇವನಿಂತು
ಎಂದಾಡಿಕೊಳುವುದು ನಾನೆಂತು
ಎಂಬುದನರಿಯದ ಪರಿ ರವಿತೇಜ //495//

ನೆಮ್ಮದಿಯನರುಸುತ್ತ ಸುತ್ತುವುದು
ಊರು ಕೇರಿಯು ಬನ್ನ
ನಿನ್ನೂರೆ ಚೆನ್ನ ರವಿತೇಜ //496//

ಬನ್ನ= ಸೋಲು, ಮರ್ಯಾದೆಗೇಡು

ಹುಸಿಹೆಮ್ಮೆಯ ಟೋಪಿಗೆ
ನೂರೆಂಟು ತೂತು
ತೋರುವುದು ನೆತ್ತಿಯ ಭಿತ್ತಿ ರವಿತೇಜ //497//

ನಗೆಯ ಬಗೆಯರಿತವಗದು
ಹುಸಿಯ ಬಲೆ ಹರಿದು
ನೆಗೆವ ಚಿಮ್ಮುಹಲಗೆಯು ರವಿತೇಜ //498//

ಬಿದ್ದೆನೆಂದೆನದಿರು ನೆಲಕೆ
ಆಧಾರವದು ನೆಗೆ ಮುಗಿಲಿಗೆ
ನೆಲವೆ ಜೀವನ ತತ್ತ್ವ ರವಿತೇಜ //499//

ಬೆಳಗು ಬೈಗಿನ ನಡುವೆ ಬಾಳು
ಅವರಿವರ ಆಡಾಡಿ ಕಳೆವುದಕಿಂತ
ಕಳೆ ಕಳೆದು ನಮ್ಮ ಕಳೆ ಬೆಳಗಲಿ ರವಿತೇಜ //500//

ಬಯಸಿದ ಭಾಗ್ಯವಿರಲು
ಅರಿವಾಗದದರ ಮಹತ್ತು
ಕೈಜಾರೆ ತಿಳಿವುದದರ ಗಮ್ಮತ್ತು ರವಿತೇಜ //501//

ಇಷ್ಟಪಟ್ಟಷ್ಟು ಸಿಗದಿರಬಹುದು
ಕಷ್ಟಪಟ್ಟಷ್ಟು ಸಿಗುವುದು ದಿಟವು
ಕೊಟ್ಟದ್ದು ಕೊಡುವುದು ಸೃಷ್ಟಿ ರವಿತೇಜ //502//

ಸಟೆಯ ಕೋಟೆ ಕರಗುವುದು ಮಳೆಗೆ
ದಿಟವಿರೆ ಅಲುಗದು ಸಿಡಿಲಚಾಟಿಗೆ
ನಿಜಮನವೆ ಸಗ್ಗಕೆ ಹಾದಿಯು ರವಿತೇಜ //503//

ದುರಾಸೆ ದುಃಖಕೆ ಕಾರಣವು
ಸದಾಸೆ ಸುಖದ ಸೋಪಾನವು
ಧ್ಯಾನಿಸಿ ತರತಮವ ಮನಗಾಣು ರವಿತೇಜ //504//

ಭವಿತವ್ಯದ ಗರ್ಭದಲಿ ತವನಿಧಿ ಇಹುದೇನ್
ಕುಳಿತರಾಗುವುದೇನ್ ಅರಸು ಚಾತುರ್ಯದಿ
ಅರ್ಥಕ್ಕೆಅರ್ಥ ಜೋಡಿಸು ಜತನದಿ ರವಿತೇಜ //505//

ಚಿಗುರು ತರಗಾಗುವುದೆಂಥ ಬೆರಗು
ಸೃಷ್ಟಿಯ ಹೊರಳುಗಳಲಿ ಚೆಲುವ ಅರಳು
ಕಿಸರಾಗದ ಕಣ್ಣಲಿ ಅನಂಗರಾಗದ ಬೆಳಕು ರವಿತೇಜ //506//

ಕಣ್ಣಿನಲಿ ಬಣ್ಣದಲಿ ಚೆಲುವ ಇಡುಗಂಟೆ
ಇಹುದು ಇರುಕಿನಲೂ ಬೆಸೆಗೊಳುವ ಬೆಳಕು
ನೋಳ್ಪಮನದೊಳೆ ಸೌಂದರ್ಯ ಮೀಮಾಂಸೆ ರವಿತೇಜ //507//

ಎಲ್ಲೋ ಹೋಗಿ ಏನೋ ಮಾಡಿದರೆ
ಕರೆಯುವರೇನು ನಿನ್ನನು ರಸಿಕ
ಅನುಕ್ಷಣದ ಅನುಭೂತಿ ರಸಿಕತನ ರವಿತೇಜ //508//

ಬಣ್ಣವ ನೋಡಿ ಬಯಸದಿರು
ಝಳಕೆ ಕರುಗುವ ಮೆರುಗು
ತೆರೆಯೊಳಗಣ್ಣ ನಿಜ ಕಂಡೀತು ರವಿತೇಜ //509//

ಅಟಕಟ್ಟುವರು ಅಟ್ಟುಣ್ಣಲಿಕೆ
ಸಟೆಯ ಸರದಾರರು ಸುತ್ತೆಲ್ಲ
ದಿಟವನನ್ವೇಷಿಸೆ ದಿಟ್ಟತನವಿರಬೇಕು ರವಿತೇಜ //510//

ಕಾಂತಿಯುಕ್ತವು ಶಾಂತಿಯು ಮೈಗೂಡೆ
ಶಮ ದಮೆಯ ಮಾಡಿದೊಡೆ
ಚರಿತ ಚಿನ್ಮಯವಾಗುವುದು ರವಿತೇಜ //511//

ಕುಕ್ಕುಣ್ಣುತ್ತಿದ್ದರೂ ಗರುಡ ತಾಳಿದ
ಜೀಮೂತವಾಹನನಾದ ವಿದ್ಯಾಧರ
ಸತ್ಯ ಕರುಣೆಯೆ ಸುಖದ ಬಿತ್ತ ರವಿತೇಜ //512//

ಅಡಿಯ ಮುಂದಿಡೆ ಸ್ವರ್ಗ
ಅಡಿಯ ಹಿಂದಿಡೆ ನರಕ
ನಾಕ ನರಕದ ನಡುವೆ ಮನದ ಗೊಡವೆ ರವಿತೇಜ //513//

ಬಳಸು ತಾಯ್ನುಡಿಯನು
ಬೆಳೆಸು ಮಣ್ಣಿನ ಹದವನು
ದಾರಕಿತ್ತ ಪಟದಂತಾಗದಿರು ರವಿತೇಜ //514//

ನಿನ್ನೆ ಬೆಳೆದು ಇಂದಾಗಿದೆ
ಕನವರಿಸದೆ ಕಳೆದುದನು
ಇಂದನು ಬೆಳೆಸು ನಾಳೆಗೆ ರವಿತೇಜ //515//

ಸಮಾನಾಂತರ ರೇಖೆಗಳು ಕೂಡುವುವು
ಅನಂತದಲಿ ಅಂತಿರಲು ಒಡಗೂಡಿ
ಸಾಗುವುದೆ ಸಹಜ ರವಿತೇಜ //516//

ನೂರು ಮಾತಿರಲಿ ನೂರು ನಿಲುವಿರಲಿ
ಮೇಲು ಕೀಳೆಣಿಸದ ಸಂಬಂಧ
ನಿರುಜ ನೊರಜಲ್ಲ ರವಿತೇಜ //517//

ನಿರುಜ= ರೋಗವಿಲ್ಲದ್ದು, ಸಹಜ, ಆರೋಗ್ಯಪೂರ್ಣ

ಲಯವುಂಟು ಗೋಳಕ್ಕೆ
ಲಯ ಕ್ಷೀರಪಥಕೆ ಲಯದಲ್ಲಿ ಲಯ
ಉದಿಪ ವಿಸ್ಮಯಕೆ ಶರಣೆನ್ನು ರವಿತೇಜ //518//

ಕಾಲನುಳಿಯೇಟಿಗೆ ಚಿಪ್ಪುಚಿಪ್ಪಾದ
ಶಿಲೆಯಲೊಡಮೂಡುವ ಮೂರುತಿಗೆ
ಸಹನೆ ದೈವತ್ವಕೆ ದಾರಿ ರವಿತೇಜ //519//

ಗುರಿಯಿರಲಿ ಸತತ ಶ್ರಮವಿರಲಿ
ಸಹಜ ಸ್ಪರ್ಧೆ ಸಕಾರಭಾವವಿರೆ
ತಾಳ್ಮೆಯಲಿ ಗೆಲುವು ಸಾಕಾರ ರವಿತೇಜ //520//

ಧೈರ್ಯಗೆಡದಿರು ನಡೆ ಆತ್ಮವಿಶ್ವಾಸದಲಿ
ಶುದ್ಧನುಡಿಯಲಿರಲಿ ಬೆವರಗಂಧ
ಬಾಳತೇರಿಗೆ ಪಚ್ಚೆಯಂಗಣವು ರವಿತೇಜ //521//

ನಾನಂತೂ ನೀನಿಂತೆಂಬ
ತರತಮ ಭಾವಕಳೆದು ನನ್ನಂತೆ
ನೀನೆಂಬ ವಿನಯ ವಿಜಯಕೆ ರವಿತೇಜ //522//

ನೇಣನೆಳೆ ಬಾಗಿ ಬಿಲ್ಲೆಸೆವ ಬಾಣ
ಬಿಲ್ಲು ನೇಣದ ಗುಣದರಿವು
ಗುರಿ ಗೆಲುವ ಪರಿ ರವಿತೇಜ //523//

ನಗುವಾಗ ನಕ್ಕು ಬಿಡು
ಅಳುವಾಗ ಅತ್ತು ಬಿಡು
ತೊರೆದು ತೋರಿಕೆಯ ರವಿತೇಜ //524//

ಅವಲೋಕನವೆ ಭರವಸೆಯು
ಸಿದ್ಧತೆಯೆ ವಿಶ್ವಾಸ
ಜೂಗರಿಸದ ಜಾಗರವೆ ಜಯ ರವಿತೇಜ //525//

ನಡೆ ನೇರವಿರೆ ನೆರವು
ನನ್ನಂತೆ ನೆರೆಯೆಂಬರಿವು
ನೆರೆ ಸೂರಮುಟ್ಟಿದರೂ ನೆಲೆ ತಪ್ಪದು ರವಿತೇಜ //526//

ನೇಣಜಂತ್ರಿಯು ಅವನು
ಬರಿಯ ಯಂತ್ರವು ನೀನು
ತಂತ್ರ ಅತಂತ್ರಗಳವನ ಚಿತ್ತ ರವಿತೇಜ //527//

ನೇಣಜಂತ್ರಿ= ಹಗ್ಗದಲ್ಲಿ ಗೊಂಬೆಯಾಡಿಸುವವನು

ಮೊದಲಿಲ್ಲ ಕೊನೆಯಿಲ್ಲ
ನಡೆಸರದಿ ನಿಲಲಹುದೆ
ನಡೆಯುತಿರುವುದೆ ಬದುಕು ರವಿತೇಜ //528//

ಹಳಸಾಗದಿರಲಿ ನೆನಪಿನ ಬುತ್ತಿ
ಇತಿಹಾಸ ಹಿಂದೆಳೆಯದಿರಲಿ
ಮುನ್ನಡೆವ ಪ್ರಕೃತಿ ಗುರುವಾಗಲಿ ರವಿತೇಜ //529//

ಬೀಸುವ ಗಾಳಿಗೆ ಗಾಳಿಯೆನಬೇಕೆ
ಅಡರುವ ಗಂಧಕೆ ಗಂಧವೆನಬೇಕೆ
ಅಭಿವ್ಯಕ್ತಿಗೆ ಹೆಸರುಬೇಕೇ ರವಿತೇಜ //530//

ಚಂದಮಾತಿನ ಗಂಧ ನೀನಲ್ಲವೆಂದ
ಹುಸಿನಗೆಯ ಮೋಡಿ ನೀನಲ್ಲವೆಂದ
ಇಂಗಿತವೆ ನಿಜವೆಂದ ರವಿತೇಜ //531//

ಹೊಟ್ಟೆ ಬಟ್ಟೆಯ ಕಟ್ಟು
ಬದುಕು ಮುದಕೊಟ್ಟು
ಆರೋಗ್ಯದ ಗುಟ್ಟು ರವಿತೇಜ //532//

ಮೇಲಿರುವಾಗ ತಲೆಬಾಗಿ ನೋಡು
ಮೇಲಿರುವಾಗ ತಲೆಭಾರವಾಗದಿರಲಿ
ನಮ್ಮವನಲ್ಲಿಹನೆಂಬ ಭಾವ ಮೂಡಲಿ ರವಿತೇಜ //533//

ಸಂಕಷ್ಟದಲೆತ್ತ ನೋಡುವೆ
ಯಾರ ಕೇಳುವೆ ಸಂತೈಸಿಕೊ ಮನವ
ದಾರಿ ತೆರೆಯುವುದು ರವಿತೇಜ //534//

ನಿನ್ನ ನೀ ಪ್ರಶ್ನಿಸಿಕೊಳ್ಳೊ ಸಂಚಾರಿ
ಸರಿದಾರಿಗಾವುದು ರಹದಾರಿ
ನಡೆ ಒಳದನಿಯ ಅನುರಣನವೇರಿ ರವಿತೇಜ //535//

ಆಳುವ ಕೂಸಿಗೆ ತಾಯಿ ಮೊಲೆಯೂಡುವಳು
ಅಪ್ಪಿಮುದ್ದಿಟ್ಟು ತಲೆಯ ಸವರುವಳು
ಭಾವ ಬಿತ್ತರಕೆ ನುಡಿಯ ಹಂಗಿಲ್ಲ ರವಿತೇಜ //536//

ಸಿಟ್ಟುಸೆಡವುಗಳು ದುಃಖದುಮ್ಮಾನಕೆ ದಾರಿ
ಸಂಯಮದ ಗಡಿ ನುಡಿ ಮುರಿಯದಿರಲಿ
ಸಹೃದಯ ಸ್ಪಂದನವು ಜೀವ ನಂದನವು ರವಿತೇಜ //537//

ಹಿಂಜರಿಕೆಯಲಿ ಜಾರದಿರು
ಹೋಲಿಸಿ ಹಲುಬದಿರು
ಪ್ರತಿಯುಸಿರಿಗೊಂದಸ್ಮಿತೆಯು ರವಿತೇಜ //538//

ಶಾಪವಿತ್ತ ಜನಕನನೆ ಜಲಬಂಧನದಿಂದ
ಬಿಡಿಸಿದ ಮಹರ್ಷಿ ಅಷ್ಟಾವಕ್ರ
ಸ್ವರೂಪದರಿವಿಗೆ ಸುರೂಪದ ಹಂಗಿಲ್ಲ ರವಿತೇಜ //539//

ಮೂಗು ಮುರಿಯದಿರು
ಎಲ್ಲೆ ಎಲ್ಲೆಂದು
ಸಲ್ಲು ಎಲ್ಲೆಯೊಳಗೆ ರವಿತೇಜ //540//

ಭೀಮನ ಕಂಡು ಮನಸೋತಳು ಹಿಡಂಬಿ
ಮನೆಯಿಂದೊಳಿದಳು ಸುಭದ್ರೆ ಅರ್ಜುನಿಗೆ
ಅನಂಗನಾಟಕ್ಕೆ ನಾಟಿಕಾಲವೆಂಬುದಿಲ್ಲ ರವಿತೇಜ //541//

ಪಳಗದಂತೆ ಭಾವಗಳು ಪಳಗಿಸು
ಪದಗಳನು ಪಳಕು ಇಲ್ಲದಂತೆ
ಎದೆಯ ಸರಕಿಗೆ ಪದ ಪಾದವು ರವಿತೇಜ //542//

ಪಳಗ =ಒಣಗಿದ ಎಲೆ, ಪಳಕು= ಬಲಪ್ರಯೋಗ

ಹಲದ ಶ್ರಮದಲ್ಲಿ ಹದನಿರಲು ನೆಲ
ಹಲಮಡಿ ಫಸಲಿರಲು
ಹೋಲಿಕೆಯು ಹೊಲ್ಲ ರವಿತೇಜ //543//

ಗುರಿ ಗಹನವಿರೆ ಲೆಕ್ಕವೇನ್
ಗಗನ ತಾರೆಗಳು ಸಾವಧಾನದಲೇರು
ಗುರಿಗರಿಯ ಮೇರು ರವಿತೇಜ //544//

ಸದ್ಗುಣದ ನುಡಿಯೊಂದು ನಿನ್ನಾತ್ಮವಾಗಲ್
ಹರಿಶ್ಚಂದ್ರನಂತೆ ನಿಷ್ಠೆಯಲಿ ಮೂಡಲ್
ಅಮೃತದಖನಿ ನೀನೆಂದು ಜನ ನುಡಿವರ್ ರವಿತೇಜ //545//


ಸಿಗುವುದು ಹಂಬಲಕೆ ತಾಂಬೂಲ
ಪಡೆದೊಡೆ ಪಡೆಯ ಬೆಂಬಲ
ಬೇರಾಗದೆ ಬೆರೆತರೆ ಈ ಕಲಕಲ ರವಿತೇಜ //546//

ಹಿಂದಿರದೆ ಮುಂದೆಂತು
ಆಕರವು ಚಿತ್ರವಕ್ಷರಕೆ
ಬಯಸದೆ ಭಾಗ್ಯವಿರದು ರವಿತೇಜ //547//

ಹಿಯಾಳಿಸದಿರು ಕೋತಿ ಮನವೆಂದು
ಜಿಗಿತಗಳಲುಂಟು ತರ್ಕದ ಕೊಂಡಿ
ನಿನ್ನ ನಡೆಯಲೇರು ಸಕಾರಣಬಂಡಿ ರವಿತೇಜ //548//

ಇಲ್ಲಿದ್ದಾಗ ಇದ್ದುಬಿಡು ಇಲ್ಲಿನಂತೆ
ಅಲ್ಲೆಂಬುದು ಅಂತೆ ಕಂತೆಯ ಸಂತೆ
ಇದು ಸೌಖ್ಯವಲ್ಲವೆನದಿರು ರವಿತೇಜ //549//

ನುಡಿಸಕ್ಕರೆಯಾಗದಿರೆ ಚಿಂತಿಲ್ಲ
ಅಕ್ಕರವಾಗಲಿ ಬೆಸೆಯುತ ಜನಮನ
ನುಡಿದಕ್ಷರ ಸಾಕ್ಷಾತ್ಕರಿಸುತ ರವಿತೇಜ //550//



ಗರಿ ಗರಿ ಸಾಲುಗಳು

"ಸ್ಮಾಲ್ ಈಸ್ ಬ್ಯೂಟಿಫುಲ್" ಎಂಬ ಗಾದೆ ಇಂಗ್ಲಿಷ್‌ನಲ್ಲಿದೆ. ಇದು 'ಟೀವಿ'ಯಿಂದ ಒಡಿದು 'ಬೀವಿ' ವರೆಗೆ ಅನ್ವಯಿಸುತ್ತದೆ. ಮುಕ್ತಕಗಳು ಆಕಾರದಲ್ಲಿ ಕಿರಿದಾದರೂ ಒಳಾರ್ಥಗಳಲ್ಲಿ ಹಿರಿದು. ತಪ್ಪಾಡಿದವರ ಪಾಲಿಗೆ ಚೊಲ್ಲು ತುಂಬಿದ ನಾಲಿಗೆ ಬೆಂಕಿಯಾಗಿ ಗಲ್ಲಿನ ಕಂಬದವರೆಗೂ ಸೆಳೆದೊಯ್ಯಬಹುದು.

ನಾಲಿಗೆ ಬೆಂಕಿಗಿಂತ ಬಿಸಿ. ಇದು ಸುಡುವಾಗ ಹೊಗೆ, ಉರಿ ಹೊರಗೆ ಕಾಣೊಲ್ಲ. ಆಡಿಸಿದವನನ್ನೇ ಬೇಯಿಸುತ್ತೆ ಎಂಬ ಮಾತು ಇಲ್ಲಿದೆ.

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವು ಮುಕ್ತಕಗಳಿಗೆ ಒಂದು ಸುಂದರ ಉದಾಹರಣೆ. ತನ್ನ ಶಿಲುಬೆಯ ತಾನೇ ಹೊತ್ತನೇ ಗುರು ಏಸು ಎಂಬ ಪದ್ಯವಿದೆ. ನಮ್ಮ ಕರ್ಮಗಳ ಭಾರ ನಾವೇ ಹೊರಬೇಕೆಂಬ ಮಾತದು. ರವೀಂದ್ರರ ಮುಕ್ತಕ ಓದುವಾಗ ಕೆಲವು ಸಾಲುಗಳು ಇದೇ ರೀತಿ ಕಾಡುತ್ತವೆ, ಓದುಗರ ಮನಸ್ಸನ್ನು ಶ್ರೀಮಂತಗೊಳಿಸುತ್ತದೆ.

* ಯಾರು ಮೆಚ್ಚಿದರೇನು, ತನ್ನ ತಾ ಮೆಚ್ಚಬೇಕು
* ಹೂವಿನಲಿ ಕಾಣದು ನೀರು ಹೀರುವ ಬೇರು
* ಗೆಲ್ಲೆಂಬ ಗೆಲ್ಲು ತಲೆಯನಾವರಿಸದಿರಲಿ.
* ಸುಳ್ಳು ಬೂದಿಯಾಯಿತಲ್ಲ ವರುಣ ಬರಲಿಲ್ಲ.

ಇವರ ಮುಕ್ತಕಗಳು ಕಾಲೋಚಿತವೂ ಹೌದು, ಕಾಲಾತೀತವೂ ಹೌದು. ಬಿ.ಎಸ್. ರವೀಂದ್ರ ಸ್ಟೇಟ್ ಬ್ಯಾಂಕಿನ ಸಿಂಬಲ್‌ನಷ್ಟೇ ಜನಪ್ರಿಯರು. ಬ್ಯಾಂಕ್ ಉದ್ಯೋಗಿಗಳ ಸಂಘಗಳಲ್ಲಿ ನಾಯಕರಾಗಿ, ಸಾಹಿತ್ಯ ಸಮಾರಂಭಗಳ ಆಯೋಜಕರಾಗಿ ಎಡಬಿಡದೆ ದುಡಿದವರು. ಅನೇಕ ಕೃತಿಗಳನ್ನು ತಾವೂ ಬರೆದರು. ಇತರರ ಕೈಲೂ ಬರೆಸಿದರು. ಇಲ್ಲಿನ ಮುಕ್ತಕಗಳು ಹುರಿಗಾಳಿನಂತೆ ಇದೆ. ಮುಕ್ಕಿ ಮುಗಿಸಬಹುದಾದರೂ ಅಲ್ಲಿರುವ ಗರಿ ಗರಿ ಸಾಲುಗಳು ಮರೆಯಾಗುವುದಿಲ್ಲ.

▸▸ ಎಂ.ಎಸ್. ನರಸಿಂಹಮೂರ್ತಿ
ಖ್ಯಾತ ಹಾಸ್ಯ ಲೇಖಕರು, ಬೆಂಗಳೂರು

